# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಬುಧವಾರ, ಜೂನ್ 26, 2024

ಸಂಪುಟ : 51 ಸಂಚಿಕೆ : 43 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com



## Grand Opening
of

# B. MURIGEPPA SIDDARAMAPPA

BEAUTIFUL HOMES
with asianpaints

**Date:** 26th june 2024, Wednesday 11:00Am Onwards
**Venue:** PB Road, Vinob Nagar, Davangere.

### Inauguration by

***Amit Syngle***
*Managing Director & CEO*

***Vishnu Goel***
*Associate Vice President*

***Shyam Swamy***
*Vice President*

***Madhu Verma***
*General Manager*

***Achint Jain***
*Associate General Manager*

***Hari Narayan***
*Associate General Manager*

***Rajverma***
*Regional Manager*

***Ajay Antony***
*Regional Manager*









BMS
PAINTS
SINCE - 1930

## ಬಿ. ಮುರಿಗೆಪ್ಪ ಸಿದ್ದರಾಮಪ್ಪ

ಪಿ.ಬಿ. ರೋಡ್, (ವಿನೋಬ ನಗರ) ಮಂಡಿಪೇಟೆ, ದಾವಣಗೆರೆ.
Mob: 98440 93399, 98440 97097.

# ಸರ್ಕಾರಿ ನೌಕರರ ಸಂಘದ ಭವನಕ್ಕೆ ಅಗತ್ಯ ನೆರವು

## ಜಗಳೂರಿನ ಶಾಸಕ ಬಿ. ದೇವೇಂದ್ರಪ್ಪ ಭರವಸೆ



ಜಗಳೂರು, ಜೂ. 25 - ನೌಕರರ ಸಂಘದ ಭವನ ನಿರ್ಮಾಣಕ್ಕೆ ಅಗತ್ಯ ನೆರವು ನೀಡುವುದಾಗಿ ಶಾಸಕ ಬಿ. ದೇವೇಂದ್ರಪ್ಪ ಭರವಸೆ ನೀಡಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಸರ್ಕಾರಿ ನೌಕರರ ಸಂಘದ ತಾಲ್ಲೂಕು ಘಟಕದ 2023-24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ವಿಜಯ ನಗರ ಜಿಲ್ಲೆಯಲ್ಲಿ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಕಳೆದ ವಾರ ನಡೆದ ಕೆಡಿಪಿ ಸಭೆಯಲ್ಲಿ ಕಳೆದ ವರ್ಷ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 10ನೇ ಸ್ಥಾನದಲ್ಲಿದ್ದ ಜಿಲ್ಲೆ ಈ ಬಾರಿ 27ನೇ ಸ್ಥಾನಕ್ಕೆ ಕುಸಿದಿದ್ದು, ಇದಕ್ಕೆ ಏನು ಉತ್ತರ ನೀಡುತ್ತೀರಿ ಎಂದು ಡಿಡಿ ಯನ್ನು ಪ್ರಶ್ನಿಸಿದ ನಂತರ ಆಯುಕ್ತರಿಗೆ ಹೇಳಿ ಅಮಾನತ್ತು ಮಾಡಿ ಸಿಇಓ ಮತ್ತು ಬಿಇಒ ಗೆ ನೋಟಿಸ್ ಜಾರಿ ಮಾಡುವಂತೆ ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿದರು. ತಾಲ್ಲೂಕಿನಲ್ಲಿ ಇಂತಹ ಘಟನೆ ನಡೆಯಬಾರದು ಎಂದರು. ತಾಲ್ಲೂಕಿನಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಡೊನೇಷನ್ ಹಾವಳಿ ಹೆಚ್ಚಳವಾಗುತ್ತಿದ್ದು ಅದಕ್ಕೆ ಕಡಿವಾಣ ಹಾಕಬೇಕಾಗಿದೆ ಎಂದು ಶಾಸಕರು ತಿಳಿಸಿದರು.

ಸಂಘದ ಸದಸ್ಯರಾಗಿ ಕಾರ್ಯ ನಿರ್ವಹಿಸಿದ ನಿವೃತ್ತ ಎಇಇ ಪ್ರಭುದೇವ್, ಅರಣ್ಯ ಇಲಾಖೆಯ ಮಂಜಪ್ಪ 30 ವರ್ಷಗಳ ಕಾಲ ಸುದೀರ್ಘ ಸೇವೆಯನ್ನು ಸಲ್ಲಿಸಿ ನಿವೃತ್ತರಾಗಿದ್ದಾರೆ ಎಂದು ಶ್ಲಾಘಿಸಿದದರು.

ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಸಿ.ಬಿ. ನಾಗರಾಜ್ ಮಾತನಾಡಿ, ಎನ್.ಜಿ.ಒ ಬಡಾವಣೆಯಲ್ಲಿ ಮೂರು ನಿವೇಶನಗಳಿದ್ದು, ತಾಲ್ಲೂಕು ಪಂಚಾಯಿತಿಯಿಂದ 10 ಲಕ್ಷ ಅನುದಾನ ನೀಡಿದ್ದಾರೆ, ಜೊತೆಗೆ ಶಾಸಕರ ಅನುದಾನದಲ್ಲಿ ಸಾಂಸ್ಕೃತಿಕ ಭವನ ನಿರ್ಮಿಸಿ ಕೊಡಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸರ್ಕಾರಿ ನೌಕರ ಸಂಘದ ಪತ್ತಿನ ಸಹಕಾರ ಸಂಘದ ಜಿಲ್ಲಾಧ್ಯಕ್ಷ ಚಂದ್ರಪ್ಪ, ತಾಲ್ಲೂಕು ಪಂಚಾಯಿತಿ ವ್ಯವಸ್ಥಾಪಕ ರವಿಕುಮಾರ್, ಪ್ರಧಾನ ಕಾರ್ಯದರ್ಶಿ ತಿಪ್ಪೇಸ್ವಾಮಿ , ಅಜ್ಜಪ್ಪ, ಮಹೇಶ್ವರಪ್ಪ, ಪಿಡಿಒಗಳು, ಕಾರ್ಯದರ್ಶಿಗಳು ಸೇರಿದಂತೆ ಸದಸ್ಯರು ಹಾಜರಿದ್ದರು.

# ಜು.21 ರಂದು ಹರಿಹರ ತಾಲ್ಲೂಕು ಅಖಿಲ ಭಾರತ ವೀರಶೈವ ಮಹಾಸಭಾ ಚುನಾವಣೆ





ಹರಿಹರ, ಜೂ.25- ತಾಲ್ಲೂಕು ಅಖಿಲ ಭಾರತ ವೀರಶೈವ ಮಹಾಸಭೆಯ ಕಾರ್ಯಕಾರಿ ಸಮಿತಿಯ ಸದಸ್ಯ ಸ್ಥಾನಗಳಿಗೆ ಹಾಗೂ ಮಹಾಸಭಾ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಯು ಬರುವ ಜುಲೈ 21 ರಂದು ನಡೆಯಲಿದೆ ಎಂದು ಚುನಾವಣಾಧಿಕಾರಿ ಪ್ರೊ. ಸಿ.ವಿ. ಪಾಟೀಲ್ ನಗರದ ಪತ್ರಿಕಾ ಭವನದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

2024 ರಿಂದ 2029ರ ಐದು ವರ್ಷಗಳ ಅವಧಿಗೆ ಚುನಾವಣೆ ಪ್ರಕ್ರಿಯೆ ನಡೆಸಲಾಗುತ್ತದೆ. ಹರಿಹರ ತಾಲ್ಲೂಕು ಅಖಿಲ ಭಾರತ ವೀರಶೈವ ಮಹಾಸಭೆಯ ಕಾರ್ಯಕಾರಿ ಸಮಿತಿಯ ಸದಸ್ಯರು ಮತ್ತು ಅಧ್ಯಕ್ಷ ಸ್ಥಾನಕ್ಕೆ ನಾಡಿದ್ದು ದಿನಾಂಕ 27ರಿಂದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಲಿದೆ.

ಜುಲೈ 4 ರಂದು ನಾಮ ಪತ್ರ ಸಲ್ಲಿಸಲು ಕೊನೆಯ ದಿನಾಂಕ. ನಾಮಪತ್ರಗಳ ಪರಿಶೀಲನೆಯು ಜುಲೈ 5ರಂದು ನಡೆಯಲಿದೆ. ನಾಮಪತ್ರ ಹಿಂಪಡೆಯಲು ಜುಲೈ 8 ಕೊನೆಯ ದಿನ. ಹರಿಹರ ತಾಲ್ಲೂಕಿನಲ್ಲಿ 600 ಮತದಾರರು ಇದ್ದು, ಮಹಾ ಸಭಾದಿಂದ ಅನುಮೋದನೆಗೊಂಡ ಅರ್ಹ ಸದಸ್ಯರುಗಳಿಗೆ ಮಾತ್ರ ಮತದಾನದ ಹಕ್ಕು ಇರುತ್ತದೆ ಎಂದು ಅವರು ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ಮಾಜಿ ತಾಲ್ಲೂಕು ಅಧ್ಯಕ್ಷ ಡಿ.ಜಿ ಶಿವಾನಂದಪ್ಪ, ಕಾರ್ಯದರ್ಶಿ ವೀರೇಶ್ ಯಾದವಾಡ, ಹೆಚ್. ಕೊಟ್ರೇಶ್, ನಾಗರಾಜ್ ಕುರುವತ್ತಿ ಇತರರು ಹಾಜರಿದ್ದರು.

# ಚಿತ್ರಿಕಿ ಶಿವಕುಮಾರ್‌ಗೆ ಸನ್ಮಾನ



ದಾವಣಗೆರೆ, ಜೂ.25- ಅಲ್ಲಮಪ್ರಭು ಸಂಶೋಧನಾ ಕೇಂದ್ರದಲ್ಲಿ ನಡೆದ ಕಾರ್ಯಕ್ರಮ ವೊಂದರಲ್ಲಿ ಮೈಸೂರಿನ ಬಸವಲಿಂಗ ಸ್ವಾಮಿಗಳು ನಗರದ ಚಿತ್ರಿಕಿ ಶಿವಕುಮಾರ್ ಅವರನ್ನು ಸನ್ಮಾನಿಸಿದರು.

# ರಾಣೇಬೆನ್ನೂರಿನಲ್ಲಿ ಅಭ್ಯಾಸ ವರ್ಗ



ರಾಣೇಬೆನ್ನೂರು, ಜೂ. 25 ಇಲ್ಲಿನ ಪರಿವರ್ತನ ತಂಡದ ಸಂಯೋಜಕರಿಗೆ ಪ್ರಜ್ಞಾ ಪ್ರವಾಹ ಹಾವೇರಿ ಜಿಲ್ಲಾ ಅಭ್ಯಾಸ ವರ್ಗದಿಂದ ದೇಶಭಕ್ತಿ ಗೀತೆಯ ಕಾರ್ಯಾಗಾರ ನಡೆಸಲಾಯಿತು.



# ಅವಧಿ ಪೂರ್ಣಗೊಂಡ ಮರಳು ಕ್ವಾರಿಗಳ ಹರಾಜು ಪ್ರಕ್ರಿಯೆ : ಟಾಸ್ಕ್ ಫೋರ್ಸ್ ಸಭೆ

## ಚನ್ನಗಿರಿ-ಹೊನ್ನಾಳಿ-ನ್ಯಾಮತಿ ತಾಲ್ಲೂಕುಗಳ ಮರಳು ಕ್ವಾರಿ-ಕಲ್ಲು ಗಣಿಗಾರಿಕೆ ವಿಷಯಗಳ ಚರ್ಚೆ

ಹೊನ್ನಾಳಿ, ಜೂ.25- ಎರಡು ತಿಂಗಳ ಅವಧಿಯಲ್ಲಿ ಮರಳು ಕ್ವಾರಿಗಳ ಹರಾಜು ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು ಎಂದು ಉಪವಿಭಾಗಾಧಿಕಾರಿ ವಿ.ಅಭಿಷೇಕ್ ತಿಳಿಸಿದರು.

ಪಟ್ಟಣದ ಉಪವಿಭಾಗಾಧಿಕಾರಿಗಳ ಕಚೇರಿ ಯಲ್ಲಿ ಮೊನ್ನೆ ಕರೆಯಲಾಗಿದ್ದ ಟಾಸ್ಕ್‌ಫೋರ್ಸ್ ಸಭೆಯಲ್ಲಿ ಅವರು ಮಾತನಾಡಿದರು.

ಆರ್.ಡಿ.ಪಿ.ಆರ್, ಮಾಲಿನ್ಯ ನಿಯಂತ್ರಣ, ಕಂದಾಯ ಇಲಾಖೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಅರಣ್ಯ ಇಲಾಖೆ, ಆರ್.ಟಿ.ಒ., ಪೊಲೀಸ್ ಇಲಾಖೆ ಈ ಎಲ್ಲಾ ಇಲಾಖೆಗಳು ಸಮನ್ವಯತೆ ಹಾಗೂ ಜವಾಬ್ದಾರಿಯಿಂದ ಕೆಲಸ ಮಾಡಬೇಕೆಂದು ಸೂಚಿಸಿದರು.

ಮರಳು ಕ್ವಾರಿಗಳಿಗೆ ಅನುಮತಿ ಕೊಡುವ ಮುನ್ನ ಟೆಂಡರ್‌ದಾರರ ಹಿನ್ನೆಲೆಯನ್ನು ಸರಿಯಾಗಿ ಪರಿಶೀಲಿಸಬೇಕು. ಈ ಹಿಂದೆ ಯಾವುದಾದರೂ ಕ್ರಿಮಿನಲ್ ಕೇಸ್‌ಗಳು ಇವರ ಮೇಲೆ ದಾಖಲಾಗಿದ್ದುದರ ಮಾಹಿತಿಯನ್ನು ಪಡೆಯಬೇಕು ಎಂದು ತಿಳಿಸಿದರು.

ಅಕ್ರಮ ಮರಳುಗಾರಿಕೆಯನ್ನು ತಡೆಗಟ್ಟಲು ತೆಗೆದುಕೊಳ್ಳಬಹುದಾದ ಇಲಾಖಾವಾರು ಕ್ರಮಗಳ ಬಗ್ಗೆ ಚರ್ಚಿಸಿದರು.

ಹೊನ್ನಾಳಿ ತಾಲ್ಲೂಕಿನ ಹುರಳೇಹಳ್ಳಿ ಮರಳು ಕ್ವಾರಿಯ ಟೆಂಡರ್ ಅವಧಿ 2025ರ ಜನವರಿ ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ. ಉಳಿದಂತೆ ಎಲ್ಲಾ ಕ್ವಾರಿಗಳು ಟೆಂಡರ್ ಪ್ರಕ್ರಿಯೆ ನಂತರ ಮರಳುಗಾರಿಕೆಯನ್ನು ಮಾಡಬಹುದಾಗಿದೆ ಎಂದರು.

ಹೊನ್ನಾಳಿ - ನ್ಯಾಮತಿ ತಾಲ್ಲೂಕುಗಳಲ್ಲಿ ಒಟ್ಟು 15 ಮರಳು ಕ್ವಾರಿಗಳನ್ನು ಗುರುತಿಸಲಾಗಿದ್ದು, ಹೊನ್ನಾಳಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಹುರಳೇಹಳ್ಳಿ, ಬೀರಗೊಂಡನಹಳ್ಳಿ, ಬೇಲಿಮಲ್ಲೂರು, ಬಾಗೇವಾಡಿ, ಚಿಕ್ಕಬಾಸೂರು, ಹಿರೇಬಾಸೂರು, ರಾಂಪುರ, ಬುಳ್ಳಾಪುರ - 2, ನ್ಯಾಮತಿ ತಾಲ್ಲೂಕಿನ ಮರಿಗೊಂಡನಹಳ್ಳಿ, ಗೋವಿನಕೋವಿ, ಮಳಲಿ, ತಗ್ಗಿಹಳ್ಳಿ, ಕೋಟೆಹಾಳ್, ಅಚ್ಯುತಾಪುರ ಕ್ವಾರಿಗಳ ಟೆಂಡರ್ ಪ್ರಕ್ರಿಯೆಗೂ ಮುಂಚೆ ಉಪವಿಭಾಗ ಸಮಿತಿಯನ್ನು ರಚಿಸಿ, ಈ ಸಮಿತಿಯ ಮುಖಾಂತರ ಮರಳುಗಾರಿಕೆಯಲ್ಲಿ ಯಾವುದೇ ಅಕ್ರಮಗಳು ನಡೆಯದಂತೆ ನೋಡಿಕೊಳ್ಳಬೇಕು ಎಂದು ಎಚ್ಚರಿಕೆ ನೀಡಿದರು.

ಸಭೆಯ ಸಮಗ್ರ ಮಾಹಿತಿಯನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಗುವುದು. ಈ ವರದಿಯನ್ನಾಧರಿಸಿ ಮುಂದಿನ ಕ್ರಮಗಳನ್ನು ಕೈಗೊಳ್ಳಲಿದ್ದಾರೆ ಎಂದು ತಿಳಿಸಿದರು.

> ಚನ್ನಗಿರಿ ತಾಲ್ಲೂಕಿನ 35, ಹೊನ್ನಾಳಿ ತಾಲ್ಲೂಕಿನ 16 ಮತ್ತು ನ್ಯಾಮತಿ ತಾಲ್ಲೂಕಿನಲ್ಲಿ 13 ಕಲ್ಲು ಗಣಿಗಾರಿಕೆಗಳಿದ್ದು, ಇವುಗಳು ನಿಯಾಮಾನುಸಾರವಾಗಿ ಗಣಿಗಾರಿಕೆ ಮಾಡುತ್ತಿರುವುದರ ಬಗ್ಗೆಯೂ ಅಧಿಕಾರಿಗಳು ನಿಗಾವಹಿಸಬೇಕು.
>
> **-ವಿ.ಅಭಿಷೇಕ್,**
> ಉಪವಿಭಾಗಾಧಿಕಾರಿಗಳು, ಹೊನ್ನಾಳಿ

ಮರಳು ಸಾಗಾಣಿಕೆ ಮಾಡುವ ವಾಹನ ಗಳಿಗೆ ಜಿಪಿಎಸ್ ಅಳವಡಿಸಲಾಗುವುದು. ಈ ಮೂಲಕ ಮರಳು ಅಕ್ರಮ ಸಾಗಾಟವನ್ನು ತಡೆಹಿಡಿಯಲಾಗುವುದು ಎಂದು ತಿಳಿಸಿದರು.

ಟಾಸ್ಕ್ ಫೋರ್ಸ್ ಸಭೆಯಲ್ಲಿ ಗ್ರಾಮಾಂತರ ಡಿವೈಎಸ್ಪಿ ರುದ್ರಪ್ಪ ಉಜ್ಜಿನಕೊಪ್ಪ, ಚನ್ನಗಿರಿ ತಹಶೀಲ್ದಾರ್ ಎರ್ರಿಸ್ವಾಮಿ, ನ್ಯಾಮತಿ ತಹಶೀಲ್ದಾರ್ ಗೋವಿಂದಪ್ಪ, ಹೊನ್ನಾಳಿ ಪ್ರಭಾರಿ ತಹಶೀಲ್ದಾರ್ ಸುರೇಶ್, ನ್ಯಾಮತಿ ಪೊಲೀಸ್ ಇನ್‌ಸ್ಪೆಕ್ಟರ್ ರವಿ, ಗಣಿ ಮತ್ತು ಭೂ - ವಿಜ್ಞಾನ ಇಲಾಖೆಯ ಚೈತ್ರಾ, ಕವಿತಾ, ರಾಜಸ್ವ ನಿರೀಕ್ಷಕರಾದ ರಮೇಶ್, ಜಯಪ್ರಕಾಶ್, ದಿನೇಶ್ ಬಾಬು, ಬಸವರಾಜ್, ಸಿಬ್ಬಂದಿ ಅವಿನಾಶ್, ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

# ಮಕ್ಕಳಿಗೆ ಪೋಷಕರೇ ಪ್ರೇರಣೆಯಾಗಬೇಕು

## ಭರಮಸಾಗರದ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ. ರೂಪ ಶಶಿಕಾಂತ್



ಭರಮಸಾಗರ, ಜೂ. 25 - ಪೋಷಕರು ತಮ್ಮ ಮಕ್ಕಳನ್ನು ಸಮಾಜದಲ್ಲಿ ಚೆನ್ನಾಗಿ ವಿದ್ಯಾಭ್ಯಾಸ ಮಾಡಿಸಬೇಕೆಂದು ತುಂಬಾ ಶ್ರಮ ವಹಿಸುತ್ತಾರೆ. ಅದರಲ್ಲಿ ಅತಿ ಮುಖ್ಯವಾಗಿ ತಾಯಿ ತನ್ನ ಮಕ್ಕಳಿಗೆ ಯಾವುದೇ ರೀತಿ ತೊಂದರೆಯಾಗದಂತೆ ಸಾಕಿ ಸಲಹಿ ನೋಡಿಕೊಳ್ಳುತ್ತಾಳೆ, ಮಕ್ಕಳು ಚೆನ್ನಾಗಿ ಇರಬೇಕೆಂದು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಾಳೆ ಎಂದು ದಾವಣಗೆರೆಯ ಸಾಹಿತಿಯೂ, ದಂತ ವೈದ್ಯರೂ ಆದ ಡಾ. ರೂಪ ಶಶಿಕಾಂತ್ ಹೇಳಿದರು.

ಭರಮಸಾಗರ ಪವಮಾನ ಪ್ರತಿಷ್ಠಾನದಿಂದ ಮೊನ್ನೆ ಏರ್ಪಾಡಾಗಿದ್ದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಶಾರದಾ ಪುರಸ್ಕಾರ ನೀಡುವ ಸಂದರ್ಭದಲ್ಲಿ ಭಾಗವಹಿಸಿ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ತಮ್ಮ ವಿದ್ಯಾಭ್ಯಾಸ ಮುಗಿದ ನಂತರ ಯಾವುದೇ ಕೆಲಸಕ್ಕೆ ಹೋದಾಗ ತಮ್ಮ ಪೋಷಕರನ್ನು ಮರೆಯಬಾರದು. ತಂದೆ-ತಾಯಿಯ ಪ್ರೀತಿ ಮುಂದೆ ಸಿಗುವುದಿಲ್ಲ. ಇರುವಾಗ ಅವರನ್ನು ಪ್ರೀತಿಯಿಂದ ನೋಡಿಕೊಳ್ಳಬೇಕು. ಇವತ್ತಿನ ಬೆಳವಣಿಗೆಯಲ್ಲಿ ತಮ್ಮ ಮಕ್ಕಳಿಗೆ ತಾವೇ ಉತ್ತಮ ಸಂಸ್ಕಾರ, ಸಂಸ್ಕೃತಿ, ನಮ್ಮ ಸನಾತನ ಧರ್ಮ, ಗುರು-ಹಿರಿಯರಲ್ಲಿ ಭಕ್ತಿ ಭಾವನೆಗಳ ಬಗ್ಗೆ ತಮ್ಮ ಮಕ್ಕಳಿಗೆ ಪೋಷಕರೇ ಪ್ರೇರಣೆಯಾಗಬೇಕೆಂದು ತಿಳಿಸಿದರು.

ಅತಿಥಿಯಾಗಿ ಪಾಲ್ಗೊಂಡಿದ್ದ ಧರ್ಮಸ್ಥಳದ ಯೋಜನಾಧಿಕಾರಿ ನಾಗರಾಜ್ ಕುಲಾಲ್ ಮಾತನಾಡಿ, ವಿದ್ಯಾರ್ಥಿಗಳು ಅವಶ್ಯಕತೆ ಇದ್ದಷ್ಟು ಮೊಬೈಲ್ ಬಳಕೆ ಮಾಡಿ. ಅದರಿಂದ ಅನುಕೂಲವಿದೆ, ಅಷ್ಟೇ ತೊಂದರೆ ಸಹ ಇದೆ ಎಂದು ಕಥೆಗಳ ಮೂಲಕ ಅರ್ಥೈಸಿದರು.

ಸ್ಥಳೀಯ ಡಿವಿಎಸ್ ವಿದ್ಯಾಸಂಸ್ಥೆಯ ಇಂಗ್ಲಿಷ್ ಉಪನ್ಯಾಸಕ ಗುರು ಕಮಲೇಶ್, ಬಿಜೆಪಿ ಹಿರಿಯ ಜೀವಿ ಎಸ್. ನಾರಾಯಣ ರಾವ್, ಡಿವಿಎಸ್ ಆಡಳಿತ ಅಧಿಕಾರಿ ಗುರು ಸಿದ್ದೇಶ್, ಶ್ರೀಮತಿ ಕೋಮಲ, ಧಾರ್ಮಿಕ ಚಿಂತಕ ಬಿ ದತ್ತಾತ್ರಿ ಮಾತನಾಡಿದರು, ವಿದ್ಯಾರ್ಥಿನಿ ಹೆಚ್. ಎಂ. ಭಾವನ ಸನ್ಮಾನ ಪಡೆದು ಮಾತನಾಡಿದರು.

ಪವಮಾನ ಪ್ರತಿಷ್ಠಾನವು ಸ್ಥಳೀಯ ವಿದ್ಯಾಸಂಸ್ಥೆ ಮಕ್ಕಳಾದ ಭಾವನ, ಅಂಕಿತ, ಐಶ್ವರ್ಯ, ಬಸವರಾಜ್, ಸಾನ್ವಿ ಕಶ್ಯಪ್, ದ್ಯಾಪನಹಳ್ಳಿ, ರಷ್ಯಾದಲ್ಲಿ ಮೆಡಿಕಲ್ ಓದುತ್ತಿರುವ ಶೈಲೇಶ್ ಕುಮಾರ್ ಅವರಿಗೆ ಶಾಲು, ಹಾರ ಪ್ರಶಸ್ತಿ ಪತ್ರ ನೀಡಿ ಶಾರದ ಪುರಸ್ಕಾರ ನೀಡಿ ಗೌರವಿಸಲಾಯಿತು.

ಸಮಾರಂಭಕ್ಕೆ ರಾಜ್ಯ ಕಿಸಾನ್ ಸಂಘದ ಕಾರ್ಯದರ್ಶಿ ಶಮೀಮ್ ಪಾಷಾ ಅವರು ಸಹಕಾರ ನೀಡಿರುತ್ತಾರೆ.

ಈ ಸಂದರ್ಭದಲ್ಲಿ ಬಣಜಿಗ ಸಮಾಜದ ಅಧ್ಯಕ್ಷ ಡಾ. ಬಸವರಾಜಪ್ಪ, ಓಂಕಾರಪ್ಪ, ಎಂ. ಶಿವಯೋಗಿ, ಶ್ರೀಮತಿ ಲತಾ, ಶ್ರೀಮತಿ ಕುಸುಮ, ಕೋಮಲ, ಶ್ರೀಮತಿ ಚಂದನ, ಕರಿಬಸಪ್ಪ, ಹಿರಿಯರಾದ ಜಯ್ಯಮ್ಮ, ಕೆಇಬಿ ಪಾರ್ವತಮ್ಮ, ಅಕ್ಷತಾ, ಶ್ರೀಮತಿ ಕವಿತಾ, ನಂದಿಹಳ್ಳಿ ರಾಮಪ್ಪ ಮತ್ತಿತರರು ಉಪಸ್ಥಿತರಿದ್ದರು.

ಗ್ರಾ.ಪಂ. ಅಧ್ಯಕ್ಷೆ ರತ್ನಮ್ಮ ಆರ್. ಜಯಣ್ಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಉಪನ್ಯಾಸಕ ಇಳಿಯರಾಜ ಪ್ರಾರ್ಥನೆ ಮಾಡಿದ ನಂತರ ಹಿರಿಯ ಪತ್ರಕರ್ತ ಬಿ.ಜೆ. ಅನಂತ ಪದ್ಮನಾಭ ರಾವ್ ಸ್ವಾಗತಿಸಿದರು. ಕು.ಅಂಜನಾ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ವಿಜಯ ಲಕ್ಷ್ಮಿ ವಂದಿಸಿದರು.

# ಹೊಳೆ ಹರಳಹಳ್ಳಿಯಲ್ಲಿ ಇಂದು ದೇವಸ್ಥಾನ ಲೋಕಾರ್ಪಣೆ, ಧರ್ಮಸಭೆ

ಶ್ರೀ ಬೇಡರ ಕಣ್ಣಪ್ಪ ಸ್ವಾಮಿ ದೇವಸ್ಥಾನ ಲೋಕಾರ್ಪಣೆ, ಶಿಲಾ ವಿಗ್ರಹ ಪ್ರಾಣ ಪ್ರತಿಷ್ಠಾಪನೆ ಮತ್ತು ಗೋಪುರದ ಕಳಸಾರೋಹಣದ ಪ್ರಯುಕ್ತ ಹೊನ್ನಾಳಿ ತಾಲ್ಲೂಕಿನ ಹೊಳೆಹರಳಹಳ್ಳಿ ಗ್ರಾಮದಲ್ಲಿ ಇಂದು ಬೆಳಿಗ್ಗೆ 10ಕ್ಕೆ ಧರ್ಮಸಭೆ ನಡೆಯಲಿದೆ. ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ, ರಟ್ಟೆಹಳ್ಳಿ ಕಬ್ಬಿಣ ಕಂತಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ಹೊನ್ನಾಳಿ ಹಿರೇಕಲ್ಮಠದ ಒಡೆಯರ್ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ವಾಲ್ಮೀಕಿ ಸಮಾಜದ ಸೇವಾ ಸಮಿತಿ ಅಧ್ಯಕ್ಷ ಸುರೇಶಪ್ಪ ತಡಕನಳ್ಳೇರ ಅಧ್ಯಕ್ಷತೆಯಲ್ಲಿ ನಡೆಯುವ ಸಮಾರಂಭದಲ್ಲಿ ಶಾಸಕ ಡಿ.ಜಿ. ಶಾಂತನಗೌಡ, ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಶಿವಾನಂದಪ್ಪ, ಬಿ. ಸೋಮಶೇಖರ್, ತಿಮ್ಮನಹಳ್ಳಿ ಟಿ.ಆರ್. ಚಂದ್ರಪ್ಪ, ನ್ಯಾಮತಿ ನಾಗರಾಜ್, ರಾಮಪ್ಪ ತೋಟದ ಮನೆ ಭಾಗವಹಿಸುವರು.

# ರಾಣೇಬೆನ್ನೂರು ಮೈಲಾರಲಿಂಗ, ದೊಡ್ಡಯ್ಯ, ಚಿಕ್ಕಯ್ಯ ದೇವರ ಮೆರವಣಿಗೆ



ರಾಣೇಬೆನ್ನೂರು, ಜೂ. 25 - ಇಲ್ಲಿನ ಕೋಟೆ ಮೈಲಾರಲಿಂಗ ದೇವಾಲಯದಲ್ಲಿ ಟ್ರಸ್ಟ್ ಕಮಿಟಿ ವತಿಯಿಂದ ದಿನಾಂಕ 23 ಮತ್ತು 24 ರಂದು ಎರಡು ದಿನಗಳ ಕಾಲ ವಿವಿಧ ಧಾರ್ಮಿಕ ಕಾರ್ಯ ಕ್ರಮಗಳು ನಡೆದು ಕೊನೆಯಲ್ಲಿ ನಗರದ ಮುಖ್ಯ ಬೀದಿಗಳಲ್ಲಿ ಮೈಲಾರಲಿಂಗ ದೇವರ ಮೆರವಣಿಗೆ ನಡೆಯಿತು. ಚಿಕ್ಕಯ್ಯ ದೇವರು, ದೊಡ್ಡಯ್ಯ ದೇವರ ಕಾರ್ಯಕ್ರಮ ಹಾಗೂ ಮಲಾರ ಹೋಮ ನಡೆಸಲಾಯಿತು. ಅರುಣಕುಮಾರ ಮುನ್ಷಿ, ಮಲಾರ ನಾಡಿಗೇರ, ಜಿ.ಎಲ್. ನಾಡಿಗೇರ, ಗಣೇಶ ನಾಡಿಗೇರ, ಶ್ರೀ ಪಾದ ಕುಲ್ಕರ್ಣಿ, ಟ್ರಸ್ಟ್ ಕಮಿಟಿ ಹಾಗೂ ಬ್ರಾಹ್ಮಣ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು. ಶ್ರೀ ನಿವಾಸ, ಧನಂಜಯ ಹಾಗೂ ವಿಕ್ರಮ ಧಾರ್ಮಿಕ ವಿಧಿ, ವಿಧಾನಗಳನ್ನ ನಡೆಸಿದರು.

# ಮಳೆಗಾಗಿ ಪ್ರಾರ್ಥಿಸಿ, ಮಲೇಬೆನ್ನೂರಿನಲ್ಲಿ ಸಂಭ್ರಮದ ಗಂಗವ್ವನ ಮೆರವಣಿಗೆ



ಮಲೇಬೆನ್ನೂರು, ಜೂ. 25- ಉತ್ತಮ ಮಳೆ, ಬೆಳೆಗಾಗಿ ಪ್ರಾರ್ಥಿಸಿ ಪ್ರತಿ ವರ್ಷ ಈ ತಿಂಗಳಲ್ಲಿ ಆಚರಿಸುವ ಗಂಗವ್ವನ ಹಬ್ಬವನ್ನು ಮಂಗಳವಾರ ಮಲೇಬೆನ್ನೂರಿನಲ್ಲಿ ಗಂಗಾಮತ ಸಮಾಜದವರು ಸಂಭ್ರಮದಿಂದ ಆಚರಿಸಿದರು.

ಪಟ್ಟಣದ ಮುಖ್ಯ ವೃತ್ತದಲ್ಲಿರುವ ಗಂಗವ್ವನ ಮೆರವಣಿಗೆ ನಂದಿಗುಡಿ ರಸ್ತೆಯಲ್ಲಿರುವ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ನಂತರ ಬನ್ನಿಕಟ್ಟೆ, ಎಸ್.ಹೆಚ್. ರಸ್ತೆ ಮಾರ್ಗವಾಗಿ ಪುನಃ ಗಂಗಮ್ಮನ ದೇವಸ್ಥಾನಕ್ಕೆ ಆಗಮಿಸಿ ಮುಕ್ತಾಯಗೊಂಡಿತು.

ಪೂರ್ಣಕುಂಭ ಹೊತ್ತ ಮಹಿಳೆಯರು ಮೆರವಣಿಗೆಗೆ ಮೆರಗು ತಂದರು.

ವಿವಿಧ ಕಲಾ ಮೇಳಗಳು ಮೆರವಣಿಗೆಯಲ್ಲಿ ಗಮನ ಸೆಳೆದವು. ಎಪಿಎಂಸಿ ಮಾಜಿ ಅಧ್ಯಕ್ಷ ಹಾಗೂ ಪಿಎಸಿಎಸ್ ಅಧ್ಯಕ್ಷ ಜಿ. ಮಂಜುನಾಥ ಪಟೇಲ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಪುರಸಭೆ ಸದಸ್ಯ ಗೌಡ್ರು ಮಂಜಣ್ಣ, ಮಲೇಬೆನ್ನೂರು ಗಂಗಾಮತ ಸಮಾಜದ ಅಧ್ಯಕ್ಷ ಅಡ್ಡಮನಿ ಧರ್ಮಣ್ಣ, ಹಿರಿಯರಾದ ಕಣ್ಣಾಳ್ ಪರಸಪ್ಪ, ಕಣ್ಣಾಳ್ ಧರ್ಮಣ್ಣ, ಕಣ್ಣಾಳ್ ಹನುಮಂತಪ್ಪ, ಬೆಳ್ಳೂಡಿ ಹನುಮಂತಪ್ಪ, ಎಂ.ಎನ್. ರಾಮಚಂದ್ರ, ನಿಟ್ಟೂರು ರಾಮಚಂದ್ರಪ್ಪ, ಜಿ.ಹೆಚ್. ರಂಗನಾಥ್, ಪೂಜಾರ್ ಚಿಕ್ಕಣ್ಣ, ದೊರೆಸ್ವಾಮಿ, ಎನ್.ಎಂ. ಮಂಜುನಾಥ್, ಪವನ್‌ಕುಮಾರ್, ಕಣ್ಣಾಳ್ ನಾಗರಾಜ್, ದೇವೇಂದ್ರಪ್ಪ, ಗುಳದಹಳ್ಳಿ ಮಂಜುನಾಥ್, ಬೆನ್ನೂರು ಕುಮಾರ್ ಸೇರಿದಂತೆ ಇನ್ನೂ ಅನೇಕರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

**ಉಡಿ ತುಂಬಿದ ಮಹಿಳೆಯರು :** ಪಟ್ಟಣದ ಹರಳಹಳ್ಳಿ ರಸ್ತೆಯಲ್ಲಿರುವ ಗ್ರಾಮ ದೇವತೆ ಶ್ರೀ ಏಕನಾಥೇಶ್ವರಿ ಅಮ್ಮನವರಿಗೆ ಆಷಾಢ ಮಾಸದ ಹಬ್ಬದ ಅಂಗವಾಗಿ ಮಹಿಳೆಯರು ಉಡಿ ತುಂಬಿ, ಪೂಜೆ ಸಲ್ಲಿಸಿದರು.

ಏಕನಾಥೇಶ್ವರಿ ದೇವಿಯ ಜೊತೆಗೆ ಕೋಡಿ ಮಾರೇಶ್ವರಿ, ಹಟ್ಟಿ ದುರ್ಗಾಂಬಿಕೆ ಅಮ್ಮನವರಿಗೂ ಉಡಿ ತುಂಬಲಾಯಿತು.

# ನೀಟ್ ಅಕ್ರಮ : ಕೇಂದ್ರ ಶಿಕ್ಷಣ ಸಚಿವರ ವಜಾಕ್ಕೆ ಡಿವಿಪಿ ಆಗ್ರಹ



ಮಲೇಬೆನ್ನೂರು, ಜೂ. 25 - ಸರ್ಕಾರಿ ನೇಮಕಾತಿಗಳಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿದ್ದು ಇತಿಹಾಸ. ಇದನ್ನೂ ಮೀರಿ ಈಗ ಕಠಿಣ ಪರೀಕ್ಷೆಗಳಾದ ನೀಟ್-ನೆಟ್ ಕೂಡ ಅಕ್ರಮದ ಗೂಡುಗಳಾಗಿ ಮಾರ್ಪಟ್ಟಿವೆ ಎದು ದಲಿತ ವಿದ್ಯಾರ್ಥಿ ಪರಿಷತ್ತಿನ ಜಿಲ್ಲಾ ಸಂಚಾಲಕ ಹಾಗೂ ಮಲೇಬೆನ್ನೂರು ಪುರಸಭೆ ಸದಸ್ಯ ಸಾಬೀರ್ ಜಯಸಿಂಹ ದೂರಿದರು.

ಹಣಕ್ಕೆ ಪ್ರಶ್ನೆ ಪತ್ರಿಕೆಗಳು ಬಿಕರಿಯಾಗಿರುವ ಆರೋಪ ಕೇಳಿಬಂದಿದ್ದು, ಪರೀಕ್ಷೆಗಳ ಪಾವಿತ್ರ್ಯತೆಗೆ ಭಂಗ ತಂದಿದೆ. ಅಭ್ಯರ್ಥಿಗಳನ್ನು ಕಂಗೆಡಿಸಿವೆ. ಇದಕ್ಕೆ ಕಾರಣರಾದ ಕೇಂದ್ರ ಶಿಕ್ಷಣ ಸಚಿವರನ್ನು ವಜಾ ಮಾಡಿ ಪಾರದರ್ಶಕತೆಯಿಂದ ಪರೀಕ್ಷೆ ನಡೆಸಬೇಕು ಎಂದು ಅವರು ಮಂಗಳವಾರ ಜಿಲ್ಲಾಧಿಕಾರಿಗಳ ಮುಖಾಂತರ ದಲಿತ ವಿದ್ಯಾರ್ಥಿ ಪರಿಷತ್ತು ಜಿಲ್ಲಾ ಘಟಕದ ವತಿಯಿಂದ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿ ಮಾತನಾಡಿದರು.

ನೀಟ್-ಯುಜಿ ಹಾಗೂ ಯುಜಿಸಿ-ನೆಟ್ ಪರೀಕ್ಷೆ ಯಲ್ಲಿ ನಡೆದ ಅಕ್ರಮಗಳ ಗದ್ದಲದಲ್ಲಿ ಮುಳುಗೇಳುತ್ತಿರುವ ಕೇಂದ್ರ ಸರ್ಕಾರ, ಇದೀಗ ನೀಟ್-ಪಿಜಿ ಪರೀಕ್ಷೆಯನ್ನು ಕೊನೆ ಕ್ಷಣದಲ್ಲಿ ಮುಂದೂಡಿಕೆ ಮಾಡಿದೆ ಎಂದರು. ಮುಂಜಾಗ್ರತಾ ಕ್ರಮವಾಗಿ ಜೂ. 26 ರಂದು ನಡೆಯಬೇಕಿದ್ದ ನೀಟ್-ಪಿಜಿ ಪರೀಕ್ಷೆಯನ್ನು ಮುಂದೂಡಿಕೆ ಮಾಡಿ ಆದೇಶ ನೀಡಿದೆ. ವಿದ್ಯಾರ್ಥಿಗಳಿಗೆ ಉಂಟಾದ ಅನಾನುಕೂಲತೆಗೆ ಪ್ರಾಮಾಣಿಕವಾಗಿ ವಿಷಾದಿಸುತ್ತೇವೆ ಎಂದು ತಿಳಿಸಿದೆ. ಕೊನೆ ಗಳಿಗೆಯಲ್ಲಿ ಏಕಾಏಕಿ ಪರೀಕ್ಷೆ ರದ್ದುಪಡಿಸಿದ್ದರಿಂದ ಎಲ್ಲೋ ಮತ್ತೊಂದು ಕಡೆ ಅಕ್ರಮ ನಡೆಯುತ್ತಿರುವ ಶಂಕೆ ವ್ಯಕ್ತವಾಗುತ್ತಿದೆ. ಆದರೆ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಬೇಕಾಗಿದ್ದ ಕೇಂದ್ರ ಸರ್ಕಾರದ ಶಿಕ್ಷಣ ಇಲಾಖೆಯ ಸಚಿವರು ಮತ್ತು ಇಲಾಖೆಯ ಅಧಿಕಾರಿಗಳು ತಮ್ಮ ಕರ್ತವ್ಯದಲ್ಲಿ ವಿಫಲಗೊಂಡಿದ್ದಾರೆ ಎಂಬದು ಮೇಲ್ನೋಟಕ್ಕೆ ಕಂಡು ಬರುತ್ತಿದೆ ಎಂದು ಹೇಳಿದರು.

ನಾಳೆ ದಿನಾಂಕ 26 ರ ಬುಧವಾರ ದೇಶದ 270 ಕೇಂದ್ರಗಳಲ್ಲಿ ಪರೀಕ್ಷೆ ನಿಗದಿಯಾಗಿತ್ತು. 2.2 ಲಕ್ಷ ಅಭ್ಯರ್ಥಿಗಳು ನೀಟ್ - ಪಿಜಿ ಪರೀಕ್ಷೆ ಬರೆಯಬೇಕಿತ್ತು. ನೀಟ್, ನೆಟ್ ಪರೀಕ್ಷೆಗಳಲ್ಲಿ ಅಕ್ರಮದ ಹಿನ್ನೆಲೆಯಲ್ಲಿ ಪರೀಕ್ಷೆ ರದ್ದು ಮಾಡಲಾಗಿದೆ ಎಂದು ತಿಳಿದು ಬರುತ್ತಿದೆ. ನೀಟ್ - ಪಿಜಿ ಹೊಸ ಪರೀಕ್ಷೆಯ ದಿನಾಂಕಗಳನ್ನು ಶೀಘ್ರದಲ್ಲೇ ಪ್ರಕಟಿಸುವುದಾಗಿ ಹೇಳಿ ಕೇಂದ್ರ ಸರ್ಕಾರ ಕೊನೆ ಕ್ಷಣದಲ್ಲಿ ಪರೀಕ್ಷೆ ರದ್ದುಪಡಿಸಿದ್ದರಿಂದ ವಿದ್ಯಾರ್ಥಿಗಳ ಹಿತದೃಷ್ಟಿ ಕಾಪಾಡುವಲ್ಲಿ ವಿಫಲತೆ ಎದ್ದು ಕಾಣುತ್ತದೆ.

ಇದೇ ವೇಳೆ ಕೇಂದ್ರವು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಮಹಾನಿರ್ದೇಶಕ ಸುಬೋಧ್ ಸಿಂಗ್ ಅವರನ್ನು ವಜಾಗೊಳಿಸಿದೆ. ಏಜೆನ್ಸಿಯ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಲು ಮತ್ತು ಪರೀಕ್ಷಾ ಸುಧಾರಣೆಗಳನ್ನು ಶಿಫಾರಸ್ಸು ಮಾಡಲು ಇಸ್ರೋ ಮಾಜಿ ಮುಖ್ಯಸ್ಥ ಕೆ. ರಾಧಾಕೃಷ್ಣನ್ ನೇತೃತ್ವದಲ್ಲಿ ಏಳು ಸದಸ್ಯರ ಸಮಿತಿಯನ್ನು ರಚಿಸಿರುವುದನ್ನು ಸಾಬೀರ್ ಸ್ವಾಗತಿಸಿದರು. ಆದರೆ, ಪದೇ ಪದೇ ಪರೀಕ್ಷೆಯಲ್ಲಿನ ಅಕ್ರಮಗಳಿಂದ ಲಕ್ಷಾಂತರ ಪರೀಕ್ಷಾರ್ಥಿಗಳು ತೊಂದರೆ ಅನುಭವಿಸುವಂತಾಗಿದೆ. ಈ ಅಕ್ರಮಗಳಿಂದ ಪ್ರತಿಭಾವಂತ ವಿದ್ಯಾರ್ಥಿಗಳು ಅವಕಾಶ ವಂಚಿತರಾಗುವ ಸಾಧ್ಯತೆ ದಟ್ಟವಾಗಿದೆ. ಹಗಲು-ರಾತ್ರಿ ಎನ್ನದೆ ಕಷ್ಟ ಪಟ್ಟು ಓದಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಪದೇ ಪದೇ ಪರೀಕ್ಷೆಯಲ್ಲಿ ನಡೆಯುವ ಅಕ್ರಮಗಳಿಂದ ಆತ್ಮಸ್ಥೈರ್ಯ ಮತ್ತು ನೆಮ್ಮದಿ ಹಾಳಾಗಿದೆ ಮತ್ತು ಲಕ್ಷಾಂತರ ವಿದ್ಯಾರ್ಥಿಗಳ ಹಾಗೂ ಅವರ ಪಾಲಕರ ಕನಸುಗಳಿಗೆ ಪೆಟ್ಟು ಬಿದ್ದಿದೆ.

ಎರಡು ಪರೀಕ್ಷೆಗಳ ನಡೆದ ಅಕ್ರಮದ ಸಂಪೂರ್ಣ ತನಿಖೆ ಆಗಬೇಕು, ತಪ್ಪಿತಸ್ಥರಿಗೆ ಕಠಿಣ ಕ್ರಮ ಕೈಗೊಳ್ಳಬೇಕು. ಪರೀಕ್ಷೆ ನಡೆಸಲು ವಿಫಲಗೊಂಡಿರುವ ಕೇಂದ್ರ ಸರ್ಕಾರದ ಶಿಕ್ಷಣ ಇಲಾಖೆ ಸಚಿವರು ಮತ್ತು ಇಲಾಖೆಗಳ ಅಧಿಕಾರಿಗಳನ್ನು ವಜಾಗೊಳಿಸಬೇಕು. ಇದರ ಜೊತೆಗೆ ಶೈಕ್ಷಣಿಕ ಸೀಟ್ ಹಂಚಿಕೆ ಮಾಡಲು ನೀಟ್ - ನೆಟ್ ಪರೀಕ್ಷೆ ನಡೆಸುವ ಅಧಿಕಾರವನ್ನು ಆಯಾ ರಾಜ್ಯಗಳ ರಾಜ್ಯ ಸರ್ಕಾರಕ್ಕೆ ನೀಡಬೇಕೆಂದು ಈ ಮೂಲಕ ದಲಿತ ವಿದ್ಯಾರ್ಥಿ ಪರಿಷತ್ ಸಂಘಟನೆ ಆಗ್ರಹಿಸಿದೆ ಎಂದು ಸಾಬೀರ್ ಹೇಳಿದರು.

ಹರಿಹರ ತಾಲ್ಲೂಕು ಗೌರವ ಸಂಚಾಲಕ ಹಾಗೂ ಪುರಸಭೆ ಸದಸ್ಯ ಭೋವಿ ಶಿವು, ಪುರಸಭಾ ಸದಸ್ಯ ನಯಾಜ್ ಅಹಮದ್, ಶಬ್ಬೀರ್ ಖಾನ್, ಗೌಡ್ರ ಮಂಜಣ್ಣ ಹಾಗೂ ಅನ್ವರ್ ಸಾಬ್, ಕೆ ಪಿ ಗಂಗಾಧರ್, ಭಾನುವಳ್ಳಿ ಸುರೇಶ್ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

# ಹೊನ್ನಾಳಿಯಲ್ಲಿ ಓಸಿ : 4020 ರೂ.ಗಳ ವಶ

ಹೊನ್ನಾಳಿ, ಜೂ.25- ಪಟ್ಟಣದ ಮಹಾಲಕ್ಷ್ಮಿ ಸರ್ಕಲ್‌ನಲ್ಲಿ ಓಸಿ ಬರೆಯುತ್ತಿದ್ದ ದುರ್ಗಿಗುಡಿ ವಾಸಿ ಎನ್ನಲಾದ ನವೀನ ಎಂಬಾತನನ್ನು ಬಂಧಿಸಿದ ಪೊಲೀಸರು, ಆತನಿಂದ 4020 ರೂ. ಹಾಗೂ ಓಸಿ ಬರೆಯುತ್ತಿದ್ದ ಚೀಟಿಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಇನ್‌ಸ್ಪೆಕ್ಟರ್ ಸುನೀಲ್ ಕುಮಾರ್ ತಿಳಿಸಿದ್ದಾರೆ.

# ಜೆ.ಹೆಚ್. ಬಡಾವಣೆಯಲ್ಲಿ ಮೂಲಭೂತ ಸೌಕರ್ಯಗಳ ಕೊರತೆ: ನಾಗರಿಕರ ದೂರು

ದಾವಣಗೆರೆ, ಜೂ. 25- ಮಹಾನಗರ ಪಾಲಿಕೆ ವ್ಯಾಪ್ತಿಯ ಶಾಮನೂರು ಬಳಿ ಇರುವ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇದ್ದು, ಸಾರ್ವಜನಿಕರಿಗೆ ತೀವ್ರ ತೊಂದರೆ ಉಂಟಾಗಿದೆ ಎಂದು ಬಡಾವಣೆಯ ನಾಗರಿಕರು ದೂರಿದ್ದಾರೆ.

ಕುಡಿಯುವ ನೀರು ಸಮರ್ಪಕವಾಗಿ ವಿತರಣೆಯಾಗುತ್ತಿಲ್ಲ. ಬೀದಿ ದೀಪಗಳು ಸರಿಯಾಗಿಲ್ಲದ ಕಾರಣ ರಾತ್ರಿ ವೇಳೆ ವಾಯುವಿಹಾರಕ್ಕೆ ಹೋಗುವವರಿಗೆ ತುಂಬಾ ತೊಂದರೆಯಾಗಿದೆ.

ಪೋದಾರ್ ಸರ್ಕಲ್‌ನಲ್ಲಿ ಗುಂಡಿಗಳಿದ್ದು ವಾಹನ ಸವಾರರಿಗೆ ತುಂಬಾ ತೊಂದರೆಯಾಗಿದೆ. ದಿನ ನಿತ್ಯ ಬಡಾವಣೆಯಿಂದ ನಗರಕ್ಕೆ ಹೋಗಿ ಬರುವ ವಿದ್ಯಾರ್ಥಿಗಳು, ಮಹಿಳೆಯರು, ವೃದ್ಧರು, ಉದ್ಯೋಗಿಗಳಿಗೆ ಬಸ್ ವ್ಯವಸ್ಥೆ ಇರುವುದಿಲ್ಲ. ಎಲ್ಲಾ ಬಸ್‌ಗಳು ಶಾಮನೂರುಗೆ ಮಾತ್ರ ಬಂದು ಹೋಗುತ್ತವೆ ಇದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗಿದೆ.

ಜೆ.ಹೆಚ್. ಬಡಾವಣೆಯಲ್ಲಿ ದಾವಣಗೆರೆ ಮುಕ್ತ ವಿಶ್ವವಿದ್ಯಾನಿಲಯ ಸೇರಿದಂತೆ, ವಿವಿಧ ಸರ್ಕಾರಿ ಇಲಾಖೆ, ವಿದ್ಯಾರ್ಥಿ ನಿಲಯಗಳು, ಶಾಲಾ-ಕಾಲೇಜುಗಳಿದ್ದು , ಸಾರ್ವಜನಿಕರ ಹಿತದೃಷ್ಠಿಯಿಂದ ಕೂಡಲೇ ಬಸ್ ವ್ಯವಸ್ಥೆ, ಸಮರ್ಪಕ ಕುಡಿಯುವ ನೀರು ಸರಬರಾಜು ವ್ಯವಸ್ಥೆ, ಬೀದಿ ದೀಪ ಅಳವಡಿಕೆ ಸೇರಿದಂತೆ ಅಗತ್ಯ ಸೌಕರ್ಯ ಗಳನ್ನು ಕಲ್ಪಿಸುವಂತೆ ಜಯಪ್ರಕಾಶ್ ಕುಂದೂರು. ಶರಣಪ್ಪ, ಪ್ರವೀಣ್, ನಾಗೇಂದ್ರಪ್ಪ, ಜಯಣ್ಣ, ಗಂಗಾಧರಪ್ಪ, ನಾಗಪ್ಪ, ಮಹೇಶ್ವರಪ್ಪ ಸೇರಿದಂತೆ ಬಡಾವಣೆಯ ಮುಖಂಡರು ಜಿಲ್ಲಾಧಿಕಾರಿಗಳನ್ನು ಹಾಗೂ ಸಂಬಂಧಿಸಿದ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ಅದರಂತೆ ವಾಜಪೇಯಿ ಬಡಾವಣೆಯಲ್ಲಿ ನಾಯಿಗಳ, ಹಂದಿಗಳ ಉಪಟಳ ಹೆಚ್ಚಾಗಿದೆ. ಜೂಜು ತಾಣಗಳು ಹೆಚ್ಚಾಗಿದ್ದು, ಕುಡಿದು ಎಲ್ಲೆಂದರಲ್ಲಿ ಬಾಟಲಿಗಳನ್ನು ಬಿಸಾಕಿ ಹೋಗುತ್ತಾರೆ. ಕಸದ ರಾಶಿ ಇದ್ದು ಕಸದ ವಾಹನದವರು ಸಹ ಬರುವುದಿಲ್ಲ. ಅಧಿಕಾರಿಗಳು ಇತ್ತ ಗಮನಹರಿಸಿ ಸರಿಯಾದ ವ್ಯವಸ್ಥೆ ಕಲ್ಪಿಸಿಕೊಡುವಂತೆ ಮನವಿ ಮಾಡಿದ್ದಾರೆ.

# ಜನತಾವಾಣಿ

ಸಂಪಾದಕರು : ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ ಬುಧವಾರ, ಜೂನ್ 26, 2024

## ಡಿ.20ರಿಂದ ಮಂಡ್ಯದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ



ಬೆಂಗಳೂರು, ಜೂ. 25- ಮಂಡ್ಯದಲ್ಲಿ ಡಿಸೆಂಬರ್ 20, 21, 22 ರಂದು 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಮಂಡ್ಯ ಜಿಲ್ಲಾಡಳಿತ, ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರೊಂದಿಗೆ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆ ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಜೂನ್‌ನಲ್ಲಿ ಸಮ್ಮೇಳನ ಆಯೋಜಿಸಲು ತೀರ್ಮಾನಿಸಲಾಗಿತ್ತು, ಆದರೆ ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಮುಂದೂಡಲಾಯಿತು, ಇದೀಗ ಡಿಸೆಂಬರ್ ತಿಂಗಳಲ್ಲಿ ಸಮ್ಮೇಳನ ನಡೆಸಲು ನಿರ್ಧರಿಸಲಾಗಿದೆ.

ರಾಜ್ಯ, ಹೊರ ರಾಜ್ಯ ಹಾಗೂ ವಿದೇಶದಿಂದ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರು ಭಾಗವಹಿಸುವ ನಿರೀಕ್ಷೆ ಇದೆ, ಸರ್ಕಾರ ಹಾಗೂ ಜಿಲ್ಲಾಡಳಿತ, ಸಾಹಿತ್ಯ ಪರಿಷತ್ತಿಗೆ ಎಲ್ಲ ರೀತಿಯ ಸಹಕಾರ ನೀಡಲಿದೆ.

ಸಾಹಿತ್ಯ ಸಮ್ಮೇಳನಾಧ್ಯಕ್ಷರ ಆಯ್ಕೆ ಮಾಹಿತಿ ನೀಡಲಾಗುವುದು, ಜಿಲ್ಲಾಡಳಿತ ಹಾಗೂ ಸಾಹಿತ್ಯ ಪರಿಷತ್ ಸಾಹಿತಿಗಳ ಪಟ್ಟಿ ನೀಡಿದ ನಂತರ ಸರ್ಕಾರದೊಂದಿಗೆ ಚರ್ಚಿಸಿ, ಸಮ್ಮೇಳನಾಧ್ಯಕ್ಷರ ಹೆಸರು ಅಂತಿಮಗೊಳಿಸಲು ತೀರ್ಮಾನಿಸಲಾಯಿತು. (5ನೇ ಪುಟಕ್ಕೆ)

## ಲೋಕಸಭೆ ವಿರೋಧ ಪಕ್ಷದ ನಾಯಕರಾಗಿ ರಾಹುಲ್



ನವದೆಹಲಿ, ಜೂ.25- ಲೋಕಸಭೆ ವಿರೋಧ ಪಕ್ಷದ ನಾಯಕರಾಗಿ ಕಾಂಗ್ರೆಸ್ ನಾಯಕ ಹಾಗೂ ರಾಯ್ ಬರೇಲಿ ಸಂಸದ ರಾಹುಲ್ ಗಾಂಧಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹೇಳಿದ್ದಾರೆ.

ಮಂಗಳವಾರ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ಇಂಡಿಯಾ ಮೈತ್ರಿಕೂಟ ಸಭೆ ನಡೆಯಿತು. ಈ ಸಭೆಯಲ್ಲಿ ರಾಹುಲ್ ಗಾಂಧಿ ಅವರನ್ನು ವಿರೋಧ ಪಕ್ಷದ ನಾಯಕರನ್ನಾಗಿ ಮಾಡುವ ಬಗ್ಗೆ ಚರ್ಚೆ ನಡೆಸಲಾಯಿತು. ಇಂಡಿಯಾ ಬ್ಲಾಕ್ ಸಭೆಯ ನಂತರ ರಾಹುಲ್ ಗಾಂಧಿ ಅವರನ್ನು ಸದನದ ವಿರೋಧ ಪಕ್ಷದ ನಾಯಕರನ್ನಾಗಿ ಮಾಡುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗಿದೆ ಎಂದು ವೇಣುಗೋಪಾಲ್ ಮಾಹಿತಿ ನೀಡಿದ್ದಾರೆ.

## ಆಂಗ್ಲ ಮಾಧ್ಯಮ ಹೆಚ್ಚುವರಿ ವಿಭಾಗಕ್ಕೆ ಸಮ್ಮತಿ

ಬೆಂಗಳೂರು, ಜೂ. 25 - ಒಂದನೇ ತರಗತಿಯಿಂದ ಆಂಗ್ಲ ಮಾಧ್ಯಮದಲ್ಲಿ ಬೋಧನೆ ಮಾಡುತ್ತಿರುವ 25 ಸರ್ಕಾರಿ ಶಾಲೆಗಳಲ್ಲಿ ಹೆಚ್ಚುವರಿಯಾಗಿ ಮತ್ತೊಂದು ವಿಭಾಗ ಆರಂಭಿಸಲು ಶಾಲಾ ಶಿಕ್ಷಣ ಇಲಾಖೆ ಅನುಮತಿ ನೀಡಿದೆ.

ರಾಜ್ಯದಲ್ಲಿ ಪ್ರಸ್ತುತ 2,404 ಸರ್ಕಾರಿ ಶಾಲೆಗಳಲ್ಲಿ ಕನ್ನಡ ಹಾಗೂ ಉರ್ದು ಮಾಧ್ಯಮದ ಜತೆಗೆ, ಆಂಗ್ಲ ಮಾಧ್ಯಮ ತರಗತಿಗಳಿಗೂ ಅವಕಾಶ ನೀಡಲಾಗಿದೆ. (5ನೇ ಪುಟಕ್ಕೆ)

## ಸ್ಪೀಕರ್ ಚುನಾವಣೆ ಕಾಂಗ್ರೆಸ್‌ನಿಂದ ವಿಪ್

ನವದೆಹಲಿ, ಜೂ.25- 18ನೇ ಲೋಕಸಭೆಯ ಸ್ಪೀಕರ್ ಸ್ಥಾನಕ್ಕೆ ಬುಧವಾರ ಚುನಾವಣೆ ನಡೆಯಲಿದ್ದು, ಬೆಳಗ್ಗೆ 11 ಗಂಟೆಗೆ ಲೋಕಸಭೆಗೆ ಕಡ್ಡಾಯವಾಗಿ ಹಾಜರಾಗುವಂತೆ ಕಾಂಗ್ರೆಸ್ ತನ್ನ ಸಂಸದರಿಗೆ ಮೂರು ಸಾಲಿನ ವಿಪ್ ಜಾರಿ ಮಾಡಿದೆ.

ಬುಧವಾರ ಸದನದಲ್ಲಿ ಹಾಜರಿದ್ದು, ಪಕ್ಷದ ನಿಲುವನ್ನು ಬೆಂಬಲಿಸಿ ಎಂದು ಕಾಂಗ್ರೆಸ್ ಮುಖ್ಯ ಸಚೇತಕ ಕೆ. (5ನೇ ಪುಟಕ್ಕೆ)

# ನಂದಿನಿ ಹಾಲಿನ ದರ ಹೆಚ್ಚಳ

## ಪ್ರತಿ ಲೀ.ಗೆ 2 ರೂ. ಹೆಚ್ಚಳ ಇಂದಿನಿಂದಲೇ ಜಾರಿ



ಬೆಂಗಳೂರು, ಜೂ. 25- ಇತ್ತೀಚೆ ಗಷ್ಟೇ ಪ್ರತಿ ಲೀಟರ್ ಪೆಟ್ರೋಲ್, ಡೀಸೆಲ್ ದರ ಹೆಚ್ಚಳ ಮಾಡಿದ್ದ ಕಾಂಗ್ರೆಸ್ ಸರ್ಕಾರ ಇದೀಗ ನಂದಿನಿ ಹಾಲಿನ ದರವನ್ನೂ ಪ್ರತಿ ಲೀಟರ್‌ಗೆ ಎರಡು ರೂ. ಏರಿಕೆ ಮಾಡಿದೆ.

ಕರ್ನಾಟಕದಲ್ಲಿ ಹಾಲು ಉತ್ಪಾದನೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿರುವುದರಿಂದ ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್) ಎಲ್ಲಾ ಶ್ರೇಣಿಯ ಹಾಲಿನ ದರದಲ್ಲಿ ಪ್ರತಿ ಲೀಟರ್‌ಗೆ ಎರಡು ರೂ. ಹೆಚ್ಚಳ ಮಾಡಿದ್ದು, ಇದು ತಕ್ಷಣದಿಂದಲೇ (ಜೂನ್ 26ರಿಂದ) ಜಾರಿಗೆ ಬಂದಿದೆ.

ಇನ್ನು ಮುಂದೆ ಅರ್ಧ ಲೀಟರ್ ಹಾಲು ಖರೀದಿಗೂ ಎರಡು ರೂ. ಹೆಚ್ಚಿನ ದರ ನೀಡಬೇಕು, ಒಂದು ಲೀಟರ್ ಖರೀದಿಸಿದರೂ ಎರಡು ರೂ. ನೀಡಬೇಕು.

ಸಾಮಾನ್ಯವಾಗಿ ಜನರು ಹೆಚ್ಚು ಬಳಕೆ ಮಾಡುವ ಟೋನ್ಡ್ ಹಾಲಿನ ಬೆಲೆ ಪ್ರಸ್ತುತ ಲೀಟರ್ 42 ರೂ.ನಿಂದ 44 ರೂ.ಗೆ ಹೆಚ್ಚಳ ಮಾಡಲಾಗಿದೆ.

ಅದೇ ರೀತಿ ಅರ್ಧ ಲೀಟರ್ ಹಾಲಿನ ಬೆಲೆ 22 ರೂ.ನಿಂದ 24ಕ್ಕೆ ಏರಿಕೆ ಮಾಡಲಾಗಿದೆ. ಹಾಲಿನ ದರ ಹೆಚ್ಚಳ ಸಮರ್ಥಿಸಿಕೊಂಡಿರುವ ಒಕ್ಕೂಟ, ಹಾಲು ಉತ್ಪಾದನೆಯಲ್ಲಿ ಪ್ರತಿನಿತ್ಯ ಒಂದು ಕೋಟಿ ಲೀಟರ್ ಮೀರಿ ಸಂಗ್ರಹವಾಗುತ್ತಿದ್ದು, ಹೆಚ್ಚುವರಿ ಹಾಲನ್ನು ಗ್ರಾಹಕರಿಗೆ ತಲುಪಿಸಲು ಈ ನಿರ್ಣಯ ಅನಿವಾರ್ಯ ಎಂದಿದೆ.

ಇದುವರೆಗೂ ಗ್ರಾಹಕರಿಗೆ 500 ಎಂಎಲ್ ಹಾಲು ನೀಡುತ್ತಿದ್ದ ಜಾಗದಲ್ಲಿ ಇನ್ನು ಮುಂದೆ 550 ಎಂಎಲ್ ನೀಡಲಾಗುವುದು, ಅದೇ ರೀತಿ 1000 ಎಂಎಲ್ ಜಾಗದಲ್ಲಿ 1050 ಎಂಎಲ್ ಹೆಚ್ಚುವರಿ ಹಾಲನ್ನು ಗ್ರಾಹಕರಿಗೆ ನೀಡುವುದಾಗಿ ತಿಳಿಸಿದೆ. ಆದರೆ, ಮೊಸರಿನ ದರದಲ್ಲಿ ಯಾವುದೇ ಹೆಚ್ಚಳ ಮಾಡಿಲ್ಲ ಎಂದು ಒಕ್ಕೂಟ ಸ್ಪಷ್ಟಪಡಿಸಿದೆ.

ಈ ಮಧ್ಯೆ ಹಾಲಿನ ದರ ಹೆಚ್ಚಳ ಸಮರ್ಥಿಸಿಕೊಂಡಿರುವ ಮುಖ್ಯಮಂತ್ರಿ ಅವರು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದು, ನಂದಿನಿ ಹಾಲಿನ ಪ್ಯಾಕೇಟ್‌ಗಳಲ್ಲಿ ಹಾಲಿನ ಪ್ರಮಾಣವನ್ನು 50 ಎಂಎಲ್‌ನಷ್ಟು ಹೆಚ್ಚಳ ಮಾಡಿ, ಹೆಚ್ಚುವರಿ ಹಾಲಿಗೆ 2 ರೂ. ದರ ನಿಗದಿಪಡಿಸಿ ಗ್ರಾಹಕರಿಂದ ಸಂಗ್ರಹಿಸಲಾಗುತ್ತಿದೆಯೇ ವಿನಃ ಹಾಲಿನ ಬೆಲೆಯಲ್ಲಿ ಏರಿಕೆ ಮಾಡಿಲ್ಲ ಎಂದಿದ್ದಾರೆ.

ಅರ್ಧಲೀಟರ್ ಹಾಲಿನ ಪ್ಯಾಕೇಟ್‌ನಲ್ಲಿ ಇನ್ನು ಮುಂದೆ 550 ಎಂಎಲ್ ಹಾಲು ಹಾಗೂ ಲೀಟರ್ ಪ್ಯಾಕೇಟ್‌ನಲ್ಲಿ 1,050 ಎಂಎಲ್ ಹಾಲು ಸಿಗಲಿದೆ.

ಹಾಲು ಸಂಗ್ರಹಣಾ ಕೇಂದ್ರಗಳಿಗೆ ರೈತರು ಹೆಚ್ಚುವರಿಯಾಗಿ ತರುತ್ತಿರುವ ಹಾಲನ್ನು ನಿರಾಕರಿಸಬಾರದೆಂಬ ಸದುದ್ದೇಶದಿಂದ ಕೆಎಂಎಫ್ ಸಂಸ್ಥೆ ಪ್ಯಾಕೇಟ್ ಹಾಲಿನ ಪ್ರಮಾಣ ಹೆಚ್ಚಳ ತೀರ್ಮಾನ ಕೈಗೊಂಡಿದೆ.

ರಾಜ್ಯದಲ್ಲಿ ಹಾಲಿನ ಉತ್ಪಾದನೆ ಶೇ.15 ಹೆಚ್ಚಳವಾಗಿದೆ, ಈ ಬಾರಿ ಸರಾಸರಿ (5ನೇ ಪುಟಕ್ಕೆ)

### ಹೊಸ ದರಗಳು

ನೀಲಿ ಪ್ಯಾಕೆಟ್ ಹಾಲು 42 ರಿಂದ 44 ರೂ., ನೀಲಿ ಪ್ಯಾಕೆಟ್ (ಟೋನ್ಡ್ ಹಾಲು) 43 ರಿಂದ 45ರೂ., ಆರೆಂಜ್ ಪ್ಯಾಕೆಟ್ ಹಾಲು 46ರಿಂದ 48 ರೂ., ಆರೆಂಜ್ ಸ್ಪೆಷಲ್ ಹಾಲು 48 ರಿಂದ 50 ರೂ., ಶುಭಂ ಹಾಲು 48ರಿಂದ 50 ರೂ., ಸಮೃದ್ಧಿ ಹಾaಲು 51ರಿಂದ 53ರೂ., ಶುಭಂ (ಟೋನ್ಡ್ ಹಾಲು) 49ರಿಂದ 51ರೂ., ಸಂತೃಪ್ತಿ ಹಾಲು 55 ರಿಂದ 57 ರೂ., ಶುಭಂ ಗೋಲ್ಡ್ ಹಾಲು 49ರಿಂದ 51ರೂ., ಶುಭಂ ಡಬಲ್ ಟೋನ್ಡ್ ಹಾಲು 41 ರಿಂದ 43 ರೂ.ಗೆ ಏರಿಕೆಯಾಗಿದೆ.

# ಜಲ, ವಾಯು, ಅರಣ್ಯ ರಕ್ಷಣೆಗೆ ಕಟಿಬದ್ಧರಾಗಬೇಕು

## ಹರಿಹರದ ಸೇಂಟ್ ಅಲೋಶಿಯಸ್ ಶಾಲೆ ಉದ್ಘಾಟನೆ ಸಮಾರಂಭದಲ್ಲಿ ರಾಜ್ಯಪಾಲ ಗೆಹ್ಲೋಟ್



ಹರಿಹರ, ಜೂ.25- ಜಲ, ವಾಯು, ಅರಣ್ಯ ಸಂರಕ್ಷಣೆಗೆ ನಾವು ಕಟಿಬದ್ಧರಾಗಬೇಕು ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಕರೆ ನೀಡಿದರು.

ಸಮೀಪದ ಅಮರಾವತಿಯ ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ನೂತನವಾಗಿ ಆರಂಭಿಸಿರುವ ಸೇಂಟ್ ಅಲೋಶಿಯಸ್ ಇಂಟರ್‌ನ್ಯಾಷನಲ್ ಸ್ಕೂಲ್ ಹಾಗೂ ಸಂತ ಅಲೋಶಿಯಸ್ ಗೊಂಜಾಗರವರ 457ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮನುಷ್ಯ ಹಾಗೂ ಜೀವರಾಶಿಯ ಉಳಿವಿನ ರಹಸ್ಯ ಅಡಗಿರುವುದು ಜಲ, ವಾಯು, ಅರಣ್ಯದಲ್ಲಿ, ಈ ಅಂಶಗಳ ಉಳಿವಿಗೆ ನಾವು ಶಕ್ತಿ ಮೀರಿ ಪ್ರಯತ್ನಿಸಬೇಕಿದೆ, ಕಟಿಬದ್ಧರಾಗಬೇಕಿದೆ ಎಂದ ಅವರು, ಪ್ರಾಣಿ, ಪಕ್ಷಿಗಳು ಸಹಜವಾಗಿ ಬದುಕುವ, ಅರಳುವ ವಾತಾವರಣ ನಿರ್ಮಿಸಬೇಕಿದೆ ಎಂದರು.

ಬಹು ಹಿಂದೆಯೇ ಭಾರತ ಶಿಕ್ಷಣ, ಜ್ಞಾನದ ವಿಷಯದಲ್ಲಿ ಜಗತ್ತಿನ ಗುರುವಾಗಿತ್ತು, ನಳಂದ, ತಕ್ಷಶಿಲಾ, ವಿಶ್ವಶಿಲಾ ವಿಶ್ವವಿದ್ಯಾಲಯಗಳಲ್ಲಿ ಅಭ್ಯಾಸ ಮಾಡಲು ವಿದ್ಯಾರ್ಥಿಗಳು ವಿಶ್ವದೆಲ್ಲೆಡೆ ಯಿಂದ ಆಗಮಿಸುತ್ತಿದ್ದರು. ಗತ ಕಾಲದ ವೈಭವ ಮರಳಿಸಲು ಪ್ರಧಾನಿ ಮೋದಿಯವರ ಮುಖಂಡತ್ವದಲ್ಲಿ ಭಾರತ ಸರ್ಕಾರವು ಈಗ ನಳಂದ ವಿಶ್ವವಿದ್ಯಾನಿಲಯದ ಪರಿಸರದಲ್ಲಿಯೇ ನಳಂದ ವಿಶ್ವವಿದ್ಯಾಲಯವನ್ನು ಆರಂಭಿಸುವ ಕಾರ್ಯಕ್ಕೆ ಮುನ್ನುಡಿ ಇಟ್ಟಿದೆ ಎಂದರು.

ಸಂತ ಅಲೋಶಿಯಸ್ ಗೊಂಜಾಗ ಅವರು ಬಲಹೀನರ ಸೇವೆಗೆ ಜೀವನ ಮುಡುಪಾಗಿಟ್ಟಿದ್ದರು, ಅವರ ಹೆಸರಲ್ಲಿ ಆರಂಭಿಸಿರುವ ಈ ಶಿಕ್ಷಣ ಸಂಸ್ಥೆಯು ಕಳೆದ 500 ವರ್ಷಗಳಿಂದ ಜಗತ್ತಿನ 105 ದೇಶಗಳಲ್ಲಿ ಶಿಕ್ಷಣ ಪ್ರಸಾರದ ಕಾರ್ಯ ಮಾಡುತ್ತಿರುವುದು ಅಭಿನಂದನೀಯ ಹಾಗೂ ಈ ಸಂಸ್ಥೆಯು ಬಡ ವರ್ಗದವರಿಗೆ ಶಿಕ್ಷಣ ಸೌಲಭ್ಯವನ್ನು ನೀಡುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದರು.

ರಾಜ್ಯಪಾಲರು ಸಂತ ಅಲೋಶಿಯಸ್ ಗೊಂಜಾಗ ಇವರ ಮೂರ್ತಿ ಹಾಗೂ ಶಾಲೆಯ ನಾಮಫಲಕ ಅನಾವರಣ ಮಾಡಿದರು.

ಶಿವಮೊಗ್ಗ ಧರ್ಮಕ್ಷೇತ್ರದ ಬಿಷಪ್ ರೆವರೆಂಡ್ ಡಾ.ಫ್ರಾನ್ಸಿಸ್ ಸೆರಾವೊ ಎಸ್.ಜೆ. ಇವರು ಮಾತನಾಡಿ, ಗುಣಮಟ್ಟದ ಹಾಗೂ ಸಮಾಜಮುಖಿ ಶಿಕ್ಷಣ ನೀಡಲು ಖ್ಯಾತವಾಗಿರುವ ಈ ಸಂಸ್ಥೆ ಅಂತರಾಷ್ಟ್ರೀಯ ಗುಣಮಟ್ಟದೊಂದಿಗೆ ಆರಂಭಿಸುವ ಶಾಲೆಯಿಂದಾಗಿ ಈ ಭಾಗದ ಮಕ್ಕಳ ಶಿಕ್ಷಣಕ್ಕೆ ಆಸರೆಯಾಗಿದೆ ಎಂದರು.

ಶಾಸಕ ಬಿ.ಪಿ.ಹರೀಶ್ ಮಾತನಾಡಿ, ರಾಜ್ಯಪಾಲರು ಬಹು ಹಿಂದೆ ಹರಿಹರದ ಬಿರ್ಲಾ ಕಂಪನಿಯಲ್ಲಿ (5ನೇ ಪುಟಕ್ಕೆ)

## ಡೆಂಘೀ ಪ್ರಕರಣ: ಗಂಭೀರವಾಗಿ ಪರಿಗಣಿಸುವಂತೆ ಸಿಎಂ ಸೂಚನೆ

ಬೆಂಗಳೂರು, ಜೂ. 25- ಡೆಂಘೀ ಪತ್ತೆ ಮತ್ತು ಚಿಕಿತ್ಸೆಯನ್ನು ಗಂಭೀರವಾಗಿ ಪರಿಗಣಿಸುವಂತೆ ಯೂ, ಅಗತ್ಯ ಚಿಕಿತ್ಸೆ, ಚುಚ್ಚುಮದ್ದು, ಪ್ಲೇಟ್ ಲೆಟ್ಸ್ ಗಳನ್ನು ಸಂಗ್ರಹಿಸಿಟ್ಟುಕೊಳ್ಳುವಂತೆಯೂ ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ರಾಜ್ಯದಲ್ಲಿ ಡೆಂಘೀ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಆರೋಗ್ಯ ಸಚಿವರು ಹಾಗೂ ಸರ್ಕಾರದ ಹಿರಿಯ ಅಧಿಕಾರಿಗಳೊಂದಿಗೆ ಅವರು ಸಭೆ ನಡೆಸಿದರು. ರಾಜ್ಯದಲ್ಲಿ ನಿನ್ನೆಯ ವರೆಗೆ ಒಟ್ಟು 5374 ಪ್ರಕರಣಗಳು ವರದಿಯಾಗಿದ್ದು, 5 ಮರಣಗಳು ಸಂಭವಿಸಿವೆ. ಭಾರತ ಸರ್ಕಾರವು ಡೆಂಘೀ ಪ್ರಕರಣಗಳಲ್ಲಿ ಮರಣ ಪ್ರಮಾಣ ಶೇ. 0.5 ನ್ನು ಮೀರುವಂತಿಲ್ಲ ಎಂದು ನಿಗದಿ ಪಡಿಸಿದೆ. ರಾಜ್ಯದಲ್ಲಿ ಮರಣ ಪ್ರಮಾಣ ಶೇ.0.09 ಇನ್ನೂ ಕಡಿಮೆ ಪ್ರಮಾಣದಲ್ಲಿದೆ.

ಬೆಂಗಳೂರು, ಚಿಕ್ಕಮಗಳೂರು, ಮೈಸೂರು, ಹಾವೇರಿ, ಶಿವಮೊಗ್ಗ, ಚಿತ್ರದುರ್ಗ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ಕಾಣಿಸಿಕೊಂಡಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 1230 ಪ್ರಕರಣಗಳು ವರದಿಯಾಗಿವೆ. (5ನೇ ಪುಟಕ್ಕೆ)

## ಕೇಜ್ರಿವಾಲ್‌ಗೆ ಜಾಮೀನು ನಿರಾಕರಿಸಿದ ಹೈಕೋರ್ಟ್



ನವದೆಹಲಿ, ಜೂ.25- ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರಿಗೆ ಜಾಮೀನು ನೀಡಲು ದೆಹಲಿ ಹೈಕೋರ್ಟ್ ನಿರಾಕರಿಸಿದೆ. ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಅವರು ಬಂಧನಕ್ಕೊಳಗಾಗಿದ್ದರು.

ವಿಚಾರಣಾ ನ್ಯಾಯಾಲಯ ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್ ಅವರಿಗೆ ಜಾಮೀನು ಮಂಜೂರು ಮಾಡಿತ್ತು. ಆದರೆ ವಿಚಾರಣಾ ನ್ಯಾಯಾಲದ ಆದೇಶ ತಡೆಹಿಡಿಯುವಂತೆ ಕೋರಿ ಜಾರಿ ನಿರ್ದೇಶನಾಲಯ ಮಾಡಿದ್ದ ಮನವಿಗೆ ದೆಹಲಿ ಹೈಕೋರ್ಟ್ ಪುರಸ್ಕರಿಸಿದೆ.

ಜಸ್ಟಿಸ್ ಸುಧೀರ್ ಕುಮಾರ್ ಜೈನ್ ಅವರ ಪೀಠ, ಜೂನ್ 20 ರಂದು ವಿಚಾರಣಾ ನ್ಯಾಯಾಲಯ ಅರವಿಂದ್ ಕೇಜ್ರಿವಾಲ್ ಅವರಿಗೆ ನೀಡಿದ್ದ ಜಾಮೀನು ಆದೇಶಕ್ಕೆ ತಡೆ ನೀಡಿದೆ.

ಟ್ರಯಲ್ ಕೋರ್ಟ್‌ನ (5ನೇ ಪುಟಕ್ಕೆ)

# ಜಲಸಿರಿ ವಿದ್ಯುತ್ ಬಿಲ್ ನೀಡುತ್ತಿಲ್ಲ

## ಬಿಜೆಪಿ ಸದಸ್ಯರ ಆರೋಪದಲ್ಲಿ ಯಾವುದೇ ಹುರುಳಿಲ್ಲ: ಎ.ನಾಗರಾಜ್ ಸ್ಪಷ್ಟನೆ



ದಾವಣಗೆರೆ, ಜೂ. 25- ಅಧಿಕಾರ ಕಳೆದುಕೊಂಡ ಹತಾಶೆಯಲ್ಲಿ ಮಹಾನಗರ ಪಾಲಿಕೆ ಬಿಜೆಪಿ ಸದಸ್ಯರು ಆಡಳಿತ ಪಕ್ಷದವರ ಮೇಲೆ ಆರೋಪ ಮಾಡುತ್ತಿದ್ದಾರೆ. ಇದರಲ್ಲಿ ಯಾವುದೇ ಹುರುಳಿಲ್ಲ ಎಂದು ಪಾಲಿಕೆ ಸದಸ್ಯ ಎ. ನಾಗರಾಜ್ ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು.

ಜಲಸಿರಿ ಯೋಜನೆಯಡಿ ಸಮರ್ಪಕವಾಗಿ ನೀರು ಸರಬರಾಜು ಮಾಡದಿದ್ದರೂ, ಕಾಮಗಾರಿ ಪೂರ್ಣಗೊಳ್ಳದಿದ್ದರೂ ಕೆಲವು ಕಡೆ ವಿದ್ಯುತ್ ಬಿಲ್ ನೀಡುತ್ತಿದ್ದಾರೆಂದು ಬಿಜೆಪಿ ಸದಸ್ಯರು ಆರೋಪಿಸಿದ್ದಾರೆ. ಕಳೆದ 4 ತಿಂಗಳಿನಿಂದಲೂ ಕೆಲವು ವಾರ್ಡ್‌ಗಳಲ್ಲಿ ಜಲಸಿರಿ ಯೋಜನೆಯಡಿ ನೀರು ಪೂರೈಕೆ ಮಾಡಲಾಗು ತ್ತಿದೆ.

ಇನ್ನೂ ಕೆಲವು ವಾರ್ಡ್‌ಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ. ಕಾಮಗಾರಿ ಪೂರ್ಣಗೊಳ್ಳದ ಹೊರತು ಬಿಲ್ ನೀಡುವುದು ಬೇಡ ಎಂದು ಸಾಮಾನ್ಯ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.

ಅದರಂತೆ ಮೇಯರ್ (5ನೇ ಪುಟಕ್ಕೆ)

## ಹರಿಹರಕ್ಕೆ ರಾಜ್ಯಪಾಲರ ಆಗಮನ ಹಿನ್ನೆಲೆ

### ದಿಢೀರ್ ಆಗಿ ಗುಂಡಿ ಮುಚ್ಚಿದ ಲೋಕೋಪಯೋಗಿ ಇಲಾಖೆ



ಹರಿಹರ, ಜೂ.25- ನಗರದ ಸಂತ್ ಅಲೋಶಿಯಸ್ ಕಾಲೇಜಿನಲ್ಲಿ ನಡೆದ ಸಮಾರಂಭಕ್ಕೆ ರಾಜ್ಯಪಾಲ ತಾವರ್ ಚಂದ್ ಗೆಹ್ಲೋಟ್ ಅವರು ಇಂದು ಆಗಮಿಸಿದ್ದರು.

ಆದರೆ, ಅವರು ಬರುವ ರಸ್ತೆಯಲ್ಲಿ ಗುಂಡಿಗಳು ಹೆಚ್ಚು ಇದ್ದ ಪರಿಣಾಮ ರಾಜ್ಯಪಾಲರು ವೇದಿಕೆಗೆ ಬರುವ ಒಂದು ಗಂಟೆಯ ಸಮಯದ ಮುಂಚಿತವಾಗಿ ಲೋಕೋಪಯೋಗಿ ಇಲಾಖೆಯ ಅಧಿಕಾರಿ ಶಿವಮೂರ್ತಿ ಮತ್ತು ಅವರ ಸಿಬ್ಬಂದಿಗಳು ಗುಂಡಿಗಳನ್ನು ಮುಚ್ಚಿಸಲಿಕ್ಕೆ ಮುಂದಾಗಿದ್ದು ಕಂಡುಬಂದಿತು.

ರಸ್ತೆ ದುರಸ್ತಿ ಪಡಿಸಲು ತಡವಾದ ಕಾರಣ ರಸ್ತೆ ನಮ್ಮ ವ್ಯಾಪ್ತಿಯಲ್ಲಿ ಬರುವುದಿಲ್ಲ ಅಂತ ನಗರಸಭೆ ಅಧಿಕಾರಿಗಳು, ನಮ್ಮ ವ್ಯಾಪ್ತಿಯಲ್ಲಿ ಬರುವುದಿಲ್ಲ ಅಂತ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು. ಹಾಗಾಗಿ ಇಬ್ಬರ ಜಟಾಪಟಿಯಿಂದ ಕೊನೆಯಲ್ಲಿ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳೇ ಗುಂಡಿ ಮುಚ್ಚುವ ಮೂಲಕ ರಾಜ್ಯಪಾಲರು ನಿರಾಳವಾಗಿ ಕಾಲೇಜು ಆವರಣಕ್ಕೆ ತಲುಪುವಂತೆ ಮಾಡಿದರು.

ಈ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆ ಅಧಿಕಾರಿ ಶಿವಮೂರ್ತಿ, ಪೊಲೀಸ್ ಸಿಬ್ಬಂದಿ ಡಿ.ಟಿ. ಶ್ರೀನಿವಾಸ್ ಇತರರು ಹಾಜರಿದ್ದರು.

## ಪ್ರೀತಂಗೌಡ ವಿರುದ್ಧ ಎಫ್‌ಐಆರ್ ದಾಖಲಿಸಿದ ಎಸ್‌ಐಟಿ



ಬೆಂಗಳೂರು, ಜೂ. 25- ಹಾಸನ ಪೆನ್‌ಡ್ರೈವ್ ಹಾಗೂ ವೀಡಿಯೋ ಹಂಚಿಕೆ ಆರೋಪಿ, ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ಶಾಸಕ ಪ್ರೀತಂಗೌಡ ವಿರುದ್ಧ ಎಸ್‌ಐಟಿ ಪೊಲೀಸರು ಎಫ್‌ಐಆರ್ ದಾಖಲು ಮಾಡಿದ್ದಾರೆ.

ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವುದನ್ನು ವೀಡಿಯೋ ಮಾಡಿ ವೈರಲ್ ಮಾಡಿರುವ ಆರೋಪದ ಮೇಲೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಮತ್ತೊಂದು ಪ್ರಕರಣ ದಾಖಲಾಗಿದ್ದು, ಇದೇ ಪ್ರಕರಣದಲ್ಲಿ ಪ್ರೀತಂಗೌಡ ಅವರನ್ನೂ ಆರೋಪಿಯನ್ನಾಗಿ ಮಾಡಲಾಗಿದೆ.

ಇದೇ ವೇಳೆ ಪ್ರೀತಂ ಗೌಡ ಅವರ ಎಡಗೈ-ಬಲಗೈ ಬಂಟರಂತಿರುವ ಶರತ್ ಹಾಗೂ ಕಿರಣ್ ಅವರನ್ನು ಈಗಾಗಲೇ ಎಸ್‌ಐಟಿ ತನ್ನ ವಶಕ್ಕೆ ತೆಗೆದುಕೊಂಡಿದೆ.

ಸಂತ್ರಸ್ತೆಯೊಬ್ಬರು ನೀಡಿರುವ ದೂರಿನ ಆಧಾರದ ಮೇಲೆ ಎಸ್‌ಐಟಿ ಪ್ರಕರಣ ದಾಖಲು ಮಾಡಿಕೊಂಡು ಮೊಕದ್ದಮೆ ಹೂಡಿದೆ, ಇದರಿಂದ ಪ್ರೀತಂಗೌಡ ಬಂಧನದ ಭೀತಿಯಲ್ಲಿದ್ದಾರೆ. ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಜ್ವಲ್ ವಿರುದ್ಧ ಇದು ನಾಲ್ಕನೇ ಪ್ರಕರಣವಾಗಿದೆ. ನ್ಯಾಯಾಂಗ ಬಂಧನದಲ್ಲಿರುವ (5ನೇ ಪುಟಕ್ಕೆ)

## ಸ್ವಾರ್ಥಕ್ಕಾಗಿ ಸಂವಿಧಾನ ಬದಲಿಸಿದ ಇಂದಿರಾ ಗಾಂಧಿ

### ತುರ್ತು ಪರಿಸ್ಥಿತಿ ಕುರಿತ ಸಿಂಹಾವಲೋಕನ ಅಗತ್ಯ: ಶಾಸಕ ಅರವಿಂದ್ ಬೆಲ್ಲದ್



ದಾವಣಗೆರೆ, ಜೂ.25- ತುರ್ತು ಪರಿಸ್ಥಿತಿ ಜಾರಿಗೆ ತಂದು ಸಂವಿಧಾನ ಬದಲಿಸಿದವರೇ, ಇಂದು ಅಧಿಕಾರಕ್ಕಾಗಿ 'ಸಂವಿಧಾನ ಬದಲಿಸಲಾಗುತ್ತದೆ' ಎಂಬುದಾಗಿ ಹೆದರಿಸುತ್ತಿದ್ದಾರೆ ಎಂದು ಹುಬ್ಬಳ್ಳಿ-ಧಾರವಾಡ (ಪಶ್ಚಿಮ) ಶಾಸಕ ಅರವಿಂದ್ ಬೆಲ್ಲದ್ ಹೇಳಿದರು.

ನಗರದ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಸಮುದಾಯ ಭವನದಲ್ಲಿ ಮಂಗಳವಾರ ಹಮ್ಮಿಕೊಳ್ಳಲಾಗಿದ್ದ ಸಾಮಾಜಿಕ ನ್ಯಾಯಕ್ಕಾಗಿ ನಾಗರಿಕರು ಸಂಸ್ಥೆ ವತಿಯಿಂದ 'ತುರ್ತು ಪರಿಸ್ಥಿತಿ ಸಂವಿಧಾನಕ್ಕೆ ಮಾಡಿದ ಅಪಚಾರ' ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿ ಈ ಹಿಂದೆ ಸಂವಿಧಾನಕ್ಕೆ ಯಾರಿಂದ ಗಂಡಾತರ ಬಂದಿತ್ತು. ಮುಂದೆ ಯಾರಿಂದ ಬರಲಿದೆ ಎಂದು ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ. ಇತಿಹಾಸದಲ್ಲಾದ ತಪ್ಪುಗಳನ್ನು ತಿಳಿದು ಜಾಗರೂಕರಾಗಬೇಕಿದೆ ಎಂದರು.

ದೇಶದ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿಯವರು ಡಾ.ಬಿ.ಆರ್. ಅಂಬೇಡ್ಕರ್ ಅವರ ಆಶಯಗಳಿಗೆ ಮಣ್ಣೆರೆಚಿ ತಮ್ಮ ಸ್ವಾರ್ಥಕ್ಕಾಗಿ ಸಂವಿಧಾನವನ್ನು ಬದಲಿಸಿದ್ದರು. ಡಾ.ಬಿ.ಆರ್.ಅಂಬೇಡ್ಕರ್ ಅವರು 'ಸಮಾನತೆಯ ರಥವನ್ನು ಇಲ್ಲಿಯವರೆಗೆ ಎಳೆದುಕೊಂಡು ಬಂದಿದ್ದೇನೆ, ಸಾಧ್ಯವಾದರೆ ಈ ರಥವನ್ನು ಒಂದಿಂಚಾದರೂ ಮುಂದಕ್ಕೆ ತಳ್ಳಿ. ಆದರೆ ಯಾವುದೇ ಕಾರಣಕ್ಕೂ ಹಿಂದಕ್ಕೆ ತಳ್ಳಬೇಡಿ' ಎಂದು ಹೇಳಿದ್ದರು. ಆದರೆ ಇಂದಿರಾ ನೇತೃತ್ವದ ಕಾಂಗ್ರೆಸ್ ಸರ್ಕಾರ ಹಿಂದಕ್ಕೆ ತಳ್ಳುವುದಷ್ಟೇ ಅಲ್ಲ, ಪಾತಾಳಕ್ಕೆ ನೂಕಿತ್ತು ಎಂದರು.

ತಾನು ಮಾಡಿದ ಅಕ್ರಮಗಳ ಕಾರಣ ಇಂದಿರಾ ಗಾಂಧಿಯವರು ಸಂಸತ್ ಸದಸ್ಯರಾಗಿ ಆಯ್ಕೆಯಾಗಿರುವುದು ಅಸಿಂಧು ಎಂದು ಅಲಹಾಬಾದ್ ನ್ಯಾಯಾಲಯ ನೀಡಿದ್ದ ತೀರ್ಪಿನ ಪರಿಣಾಮ, ದೇಶದಲ್ಲಿ ಅಲ್ಲೋಲ ಕಲ್ಲೋಲ ಉಂಟಾಗಿತ್ತು. (5ನೇ ಪುಟಕ್ಕೆ)

**ನೆಹರೂ ಕುಟುಂಬಕ್ಕೆ ದೇಶವನ್ನು ಒತ್ತೆ ಇಟ್ಟ ಕಾಂಗ್ರೆಸ್, ಇಂದು ಸಂವಿಧಾನದ ಬಗ್ಗೆ ಮಾತನಾಡುತ್ತಿರುವುದು ದುರ್ದೈವ.**

**- ಅರವಿಂದ್ ಬೆಲ್ಲದ್, ಶಾಸಕ**

# ಮಾದಕ ವಸ್ತುಗಳಿಂದ ದೂರವಿದ್ದು, ಸಮಾಜ-ಆರೋಗ್ಯವನ್ನು ಕಾಪಾಡಿಕೊಳ್ಳಿ

ಮಾದಕ ವ್ಯಸನ ಎನ್ನುವುದು ಪ್ರಸ್ತುತವಾಗಿ ಒಂದು ಸಾಮಾಜಿಕ ಪಿಡುಗಾಗಿ ಪರಿವರ್ತನೆಯಾಗಿದೆ. ವಿಲಾಸಿ ಜೀವನ ಶೈಲಿಗೆ ಮಾರುಹೋದ ಜನರು, ಯುವಕರು, ಮಾದಕ ವ್ಯಸನಗಳ ಮೇಲೆ ಅಪಾರವಾಗಿ ಅವಲಂಬಿಯಾಗಿದ್ದಾರೆ.

ಆದ್ದರಿಂದ ಸಮುದಾಯದಲ್ಲಿ ಮಾದಕ ದ್ರವ್ಯಗಳ ಬಳಕೆ ಹಾಗೂ ಅಕ್ರಮ ಕಳ್ಳಸಾಗಣೆಯ ವಿರುದ್ಧ ಜಾಗೃತಿ ಮೂಡಿಸುವುದು ಹಾಗೂ ಜನರ ಆರೋಗ್ಯ ಕಾಪಾಡುವುದಕ್ಕೆ, ಶ್ರಮಿಸುವ ಸಲುವಾಗಿ ಮತ್ತು ಡ್ರಗ್ ಬಳಕೆ, ದುರುಪಯೋಗ ಹಾಗೂ ಅಕ್ರಮ ಕಳ್ಳಸಾಗಣೆಯ ವಿರುದ್ಧ ಜಾಗೃತಿ ಮೂಡಿಸುವುದು, ಮಾದಕ ವ್ಯಸನವನ್ನು ನಿರ್ಮೂಲನೆ ಮಾಡುವ ಉದ್ದೇಶದಿಂದ ಪ್ರತಿ ವರ್ಷ ಜೂನ್ 26 ರಂದು 'ಅಂತರರಾಷ್ಟ್ರೀಯ ಮಾದಕ ವ್ಯಸನ' ಮತ್ತು 'ಅನಧಿಕೃತ ಕಳ್ಳಸಾಗಣೆ ವಿರೋಧಿ ದಿನಾಚರಣೆಯನ್ನು ಘೋಷಣೆ :- 'ಸಾಕ್ಷ್ಯಗಳು ಸ್ಪಷ್ಟವಾಗಿದೆ : ತಡೆಗಟ್ಟುವಲ್ಲಿ ಹೂಡಿಕೆ ಮಾಡಿ'ದೊಂದಿಗೆ ಆಚರಿಸಲಾಗುತ್ತದೆ. ಈ ಪ್ರಯುಕ್ತ ಜಾಗತಿಕ ಮಟ್ಟದಲ್ಲಿ ವಿವಿಧ ಕಾರ್ಯಕ್ರಮಗಳ ಹಮ್ಮಿಕೊಳ್ಳಲಾಗುತ್ತದೆ.

ವ್ಯಸನ : ಎನ್ನುವುದು ಒಂದು ಸಂಕೀರ್ಣವಾದ ಸಮಸ್ಯೆ. ವ್ಯಸನವು ಜೀವ - ವಿಜ್ಞಾನಕ್ಕೆ ಸಂಬಂಧಿಸಿದ ಮಿದುಳಿನ ಅಸ್ವಸ್ಥತೆ. ಇವರ ಮೇಲೆ ಮಾನಸಿಕ ಹಾಗೂ ಸಾಮಾಜಿಕ ಅಂಶಗಳ ಪ್ರಭಾವ ಇರುತ್ತದೆ.

ತಾತ್ಕಾಲಿಕ ಆನಂದ ನೀಡುವ ಮಾದಕ - ದ್ರವ್ಯಗಳ (ಮದ್ಯ, ಸಿಗರೇಟ್, ಡ್ರಗ್ ಇತ್ಯಾದಿ) ಅವಲಂಬನೆಗೆ ಒಳಗಾಗುವುದನ್ನು ವ್ಯಸನ ಎನ್ನಬಹುದು. ಇದು ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ಅಂಶಗಳ ಮೇಲೆ ಪರಿಣಾಮ ಬೀರುತ್ತದೆ.

**ವ್ಯಸನವು ಆಯ್ಕೆಯೇ ?**

ಕುತೂಹಲ ಸ್ನೇಹಿತರ ಒತ್ತಡ, ಗೆಳೆಯರ ಗುಂಪಿನಲ್ಲಿ ಒಂದಾಗಬೇಕೆಂಬ ಭಾವನೆ, ಮನೆಯ ವಾತಾವರಣ, ಮನೆಯವರ ವಿರುದ್ಧ ಸಿಡಿದೇಳುವ ಅಥವಾ ತಿರುಗಿ ಬೀಳುವ ಒಂದು ಕೃತ್ಯವೆಂದು ಭಾವಿಸಿ, ಹೀಗೆ ಅನೇಕ ಕಾರಣಗಳಿಗಾಗಿ ಜನರು ಮಾದಕ ವಸ್ತುಗಳ ಸೇವನೆ ಆರಂಭಿಸುತ್ತಾರೆ. ವಾಸ್ತವವೆಂದರೆ, ವ್ಯಸನಿಗಳಾಗಲು ವಂಶವಾಹಿ ಮತ್ತು ಸುತ್ತಮುತ್ತಲಿನ ವಾತಾವರಣ ಹೆಚ್ಚಿನ ಕಾರಣವಾಗಿರಬಹುದು.

ಭಾರತದಲ್ಲಿ ಮಾದಕ ದ್ರವ್ಯಗಳನ್ನು ಮೂರು ವಿಭಾಗಗಳಲ್ಲಿ ವರ್ಗೀಕರಿಸಬಹುದು.

**- ಕಾನೂನು ಬದ್ಧ ಮಾದಕ ವಸ್ತು - ಮದ್ಯ ಮತ್ತು ತಂಬಾಕು / ಸಿಗರೇಟ್**

**- ಅಕ್ರಮ ಮಾದಕ ವಸ್ತುಗಳು ಮತ್ತು ವಿನೋದ ಉಂಟುಮಾಡುವ ಡ್ರಗ್ಸ್**

**- ಅಂಗಡಿಗಳಲ್ಲಿ ದೊರೆಯುವ ಅಥವಾ ವೈದ್ಯರು ಸೂಚಿಸಿದ ಔಷಧಿಗಳು**

**ಮಾದಕ ದ್ರವ್ಯ ವ್ಯಸನ (ಡ್ರಗ್ ಅಡಿಕ್ಷನ್)**

ಧೂಮಪಾನ, ಗಾಂಜಾ ಮುಂತಾದವುಗಳನ್ನು ಸೇದುವುದು, ಇಂಜೆಕ್ಷನ್ ಚುಚ್ಚಿಕೊಳ್ಳುವುದು, ಜಗಿಯುವುದು ಮತ್ತು ಕುಡಿಯುವುದು ಮುಂತಾಗಿ ಅನೇಕ ವಿಧದಲ್ಲಿ ಮಾದಕ ದ್ರವ್ಯಗಳನ್ನು ಬಳಸಲಾಗುತ್ತದೆ.

ಇದನ್ನು ಸೇವಿಸಿದರೆ ಮಾತ್ರ ಸ್ವಾಭಾವಿಕವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ಈ ವ್ಯಸನಕ್ಕೆ ದಾಸರಾದವರು ಭಾವಿಸುತ್ತಾರೆ. ಅದರ ಹೊರತಾಗಿ ಬದುಕಲು ಸಾಧ್ಯವೇ ಇಲ್ಲ ಎಂಬಷ್ಟು ಆ ಚಟಕ್ಕೆ ಅವಲಂಬಿತರಾಗಿರುತ್ತಾರೆ.

ಮಾದಕ ವ್ಯಸನವು ಗಂಭೀರವಾದ ಭಾವನಾತ್ಮಕ, ದೈಹಿಕ ಮತ್ತು ಸಾಮಾಜಿಕ ಸಂಬಂಧಗಳ ಸಮಸ್ಯೆಗಳಿಗೆ ಕಾರಣವಾಗಬಹುದು.

ಒತ್ತಾಯಕ್ಕೋ, ಶೈಕ್ಷಣಿಕ ಅಥವಾ ಕ್ರೀಡೆಯಲ್ಲಿ ಹೆಚ್ಚಿನ ಸಾಧನೆ ಮಾಡಬೇಕೆಂಬ ಒಲವಿನಿಂದಲೋ ಅಥವಾ ಅವರಲ್ಲಿನ ಒತ್ತಡ ಹಾಗೂ ಸಮಸ್ಯೆಗಳನ್ನು ಮರೆಯಲೋ ಮಾದಕ – ದ್ರವ್ಯಗಳನ್ನು ಉಪಯೋಗಿಸಲು ಪ್ರಾರಂಭಿಸುತ್ತಾರೆ.

ಕ್ರಮೇಣ ಡ್ರಗ್ ಬಳಕೆಯಿಂದ ಮಿದುಳಿನಲ್ಲಿ ಬದಲಾವಣೆ ಉಂಟಾಗಿ ವ್ಯಕ್ತಿಗಳು ಮಾದಕ - ವಸ್ತುಗಳನ್ನು ಹೆಚ್ಚು ಹೆಚ್ಚು ಬಯಸುವಂತೆ ಮಾಡುತ್ತದೆ. ಅಂತವರು ಅದರ ಸೇವನೆಯನ್ನು ನಿಯಂತ್ರಣ ಮಾಡಲಾಗದೇ ಹೋಗುತ್ತಾರೆ. ವ್ಯಕ್ತಿಗಳು ಅದರ ಮನೋಸಾಮರ್ಥ್ಯ ಕಳೆದುಕೊಳ್ಳುತ್ತಾರೆ. ಆ ಹವ್ಯಾಸದಿಂದ ಹೊರಬರಬೇಕೆಂದು ನಿಜವಾಗಿ ಬಯಸಿದರು ಸಾಧ್ಯವಾಗದೇ, ಮತ್ತೆ ಮತ್ತೆ ಅವುಗಳೆಡೆಗೆ ಆಕರ್ಷಿತರಾಗುತ್ತಾರೆ.

ದೀರ್ಘಕಾಲದ ಡ್ರಗ್ಸ್ ಸೇವನೆಯಿಂದ ಮಿದುಳಿನ ಕ್ರಿಯೆಯಾದ ಕಲಿಕೆ, ತೀರ್ಪು, ನಿರ್ಧಾರ, ವರ್ತನೆ ನಿಯಂತ್ರಣ ಮುಂತಾದವುಗಳ ನಿರ್ವಹಣೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಇದರೊಂದಿಗೆ ವ್ಯಕ್ತಿಗಳು ಕಾಲಕ್ರಮೇಣ ದುರ್ಬಲರಾಗಿ ಖಿನ್ನತೆ ಮತ್ತು ಬೇರೆ ರೀತಿಯ ಮಾನಸಿಕ ಅಸ್ವಸ್ಥತೆಗಳಿಗೆ ಒಳಗಾಗಬಹುದು.

**ಹವ್ಯಾಸವು ವ್ಯಸನಕ್ಕೆ ತಿರುಗುವುದನ್ನು ಗುರುತಿಸಲು:**

**- ನೀವು ಮೊದಲಿಗಿಂತಲೂ ಹೆಚ್ಚು ಮಾದಕ ವಸ್ತುಗಳನ್ನು ಬಳಸುತ್ತಿದ್ದೀರಾ ಎನ್ನುವುದನ್ನು ಗಮನಿಸಿ.**

**- ಮಾದಕ ದ್ರವ್ಯ ಸೇವಿಸದೇ ದಿನವನ್ನು ಕಳೆಯುವುದು ಸಾಧ್ಯವೇ ಇಲ್ಲ ಎಂಬ ಕಲ್ಪನೆ ನಿಮ್ಮಲ್ಲಿ ಉಂಟಾಗುವುದು.**

**- ನೀವು ಮುಂದಿನ ಅಥವಾ ಹೆಚ್ಚಿನ ಪ್ರಮಾಣದ ಮಾದಕ ವಸ್ತುವನ್ನು ಸೇವಿಸುವುದಕ್ಕೆ ನೆಪ ಹುಡುಕುತ್ತೀರಾ ಎಂದರೆ**

**- ನಿಮ್ಮ ದಿನ ನಿತ್ಯದ ಕೆಲಸಗಳನ್ನು ಮಾಡುವುದಕ್ಕೆ ಮಾದಕ ವಸ್ತು ಸಹಾಯ ಮಾಡುತ್ತದೆ ಹಾಗೂ ಹೆಚ್ಚು ಆನಂದದಾಯಕವಾಗುತ್ತದೆ ಎಂದು ಅನಿಸಿದರೆ.**

**- ನಿಮ್ಮ ಕುಟುಂಬ, ಸ್ನೇಹಿತರು ಅಥವಾ ಮನೆ ಹಾಗೂ ಹೊರಗಿನ ಕೆಲಸಗಳ ಜವಾಬ್ದಾರಿಯ ಕುರಿತು ಸರಿಯಾಗಿ ಗಮನ ನೀಡಲು ಸಾಧ್ಯವಾಗುವುದಿಲ್ಲ.**

**- ನಿಮ್ಮ ಡ್ರಗ್ ಚಟವನ್ನು ಇತರರಿಂದ ಮರೆಮಾಚಲು ಬಯಸುತ್ತೀರಿ. ನಿಮಗೆ ಹವ್ಯಾಸ ಇರುವುದನ್ನು ಹೇಳಲು ನಿರಾಕರಿಸುತ್ತೀರಿ ಅಥವಾ ನೀವು ತೆಗೆದುಕೊಳ್ಳುವುದಕ್ಕಿಂತಲೂ ಕಡಿಮೆ ಪ್ರಮಾಣವನ್ನು ಹೇಳುತ್ತೀರಿ.**



**ಜೂನ್ 26 ಅಂತರರಾಷ್ಟ್ರೀಯ ಮಾದಕ ವ್ಯಸನ ಮತ್ತು ಕಳ್ಳಸಾಗಣೆ ವಿರೋಧಿ ದಿನ**

**- ನಿಮ್ಮ ಹವ್ಯಾಸದ ಕುರಿತಾಗಿ ತಪ್ಪಿತಸ್ಥಭಾವನೆ ಅಥವಾ ನಾಚಿಕೆ ಉಂಟಾಗುತ್ತದೆ.**

ಕೆಲವು ವೇಳೆ ಇದನ್ನು ಬಿಟ್ಟುಬಿಡಲು ಯೋಚಿಸುತ್ತೀರಿ. ಆದರೆ, ನಿರ್ಧಾರ ಮುಂದೂಡುತ್ತಲೆ ಇರುತ್ತದೆ.

**ಮದ್ಯಪಾನ : ದುರಾಚಾರ (ದುರ್ಬಳಕೆ)**

ಅಥವಾ ಆಲ್ಕೋಹಾಲ್ ಅಬ್ಯೂಸ್ ಯಾವ ವ್ಯಕ್ತಿಗೆ ಕುಡಿತವನ್ನು ಒಮ್ಮೆ ಆರಂಭಿಸದರೆ ಮತ್ತೆ ನಿಲ್ಲಿಸಲು ಆಗುವುದಿಲ್ಲವೋ ಅವರನ್ನು ಕುಡಿತದ ಚಟದಿಂದ ನರಳುತ್ತಿರುವವರು ಎಂದು ಹೇಳಲಾಗುತ್ತದೆ.

ಭಾರತದಲ್ಲಿ ಶೇ.10 ಪುರುಷರು ಮತ್ತು ಶೇ.5 ಮಹಿಳೆಯರು ನಿರಂತರವಾಗಿ ಮದ್ಯಪಾನ ಮಾಡುತ್ತಾರೆಂದು ಅಂದಾಜಿಸಲಾಗಿದೆ.

ಅಧ್ಯಾಯನವೊಂದರ ಪ್ರಕಾರ 1950ರ ದಶಕದಲ್ಲಿ ಮೊದಲಬಾರಿಗೆ ಕುಡಿತ ಪ್ರಾರಂಭಿಸುವವರ ವಯಸ್ಸು 25 ವರ್ಷ ಆಗಿತ್ತು. ಈಗ ಇದು 17 ವರ್ಷಕ್ಕೆ ಬಂದಿಳಿದಿದೆ.

ಈ ಎಲ್ಲಾ ಪಾನೀಯಗಳು ಈಥೈಲ್ಆಲ್ಕೋಹಾಲ್ ಗುಣ ಹೊಂದಿದ್ದು, ಅವುಗಳಲ್ಲಿರುವ ಮೂಡ್ ಬದಲಾಯಿಸುವ ಅಂಶವು ದೇಹದ ಮೇಲೆ ಹಲವು ರೀತಿಯಲ್ಲಿ ಕೆಟ್ಟ ಪರಿಣಾಮ ಬೀರುತ್ತದೆ. ಪ್ರತಿಯೊಂದು ಮದ್ಯಪಾನೀಯಗಳಲ್ಲಿ ಈಥೈಲ್ ಆಲ್ಕೋಹಾಲ್ ಪ್ರಮಾಣ ಮಾತ್ರ ಬೇರೆ ಬೇರೆಯಾಗಿರುತ್ತದೆ.

**ಮಾದಕ ವಸ್ತು ಮತ್ತು ಮದ್ಯ ವ್ಯಸನದ ಕುರಿತಾದ ಕೆಲವು ವಾಸ್ತವಾಂಶಗಳು:**

**- ಮದ್ಯ ಸೇವಿಸುವ ಪ್ರತಿ ಇಬ್ಬರಲ್ಲಿ ಒಬ್ಬರು ತೀವ್ರವಾಗಿ ಈ ವ್ಯಸನಕ್ಕೆ ಬಲಿಬೀಳುವ ಸಾಧ್ಯತೆ ಇದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಅಂದಾಜಿಸಿದೆ.**

**- ಪ್ರತಿದಿನ 10 ಜನರು ಮಾದಕ ವ್ಯಸನಿಗಳಿಗೆ ಬಲಿಯಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.**

**- ಪ್ರತಿ 10 ಜನರಲ್ಲಿ ಇಬ್ಬರು 16 ವರ್ಷಕ್ಕಿಂತ ಕಡಿಮೆ ವಯೋಮಾನದವರೇ ಆಗಿದ್ದಾರೆಂಬುದು ದುರಂತ.**

**- ಸುಮಾರು 20ಕ್ಕೂ ಹೆಚ್ಚು ಮಿಲಿಯನ್ ಜನರು ಮಾದಕ ವ್ಯಸನದ ಮೇಲೆ ಅವಲಂಬನೆಯಾಗಿದ್ದಾರೆ.**

**- ಪ್ರತಿ ವರ್ಷ 5.70 ಲಕ್ಷಕ್ಕೂ ಹೆಚ್ಚು ಜನ ಸಾವನ್ನಪ್ಪುತ್ತಿದ್ದಾರೆ.**

**- ಭಾರತ ದೇಶದ ಮಟ್ಟಿಗೆ ಹೇಳುವುದಾದರೆ, ಅಂಕಿ-ಅಂಶಗಳ ಪ್ರಕಾರ 7.5 ಕೋಟಿಗೂ ಮೀರಿ ಮಾದಕ ವ್ಯಸನಿಗಳಿದ್ದಾರೆ.**

ಮದ್ಯ ಸೇವಿಸುವ ವ್ಯಕ್ತಿಗಳು ಮದ್ಯ ಸೇವಿಸಿದ ವ್ಯಕ್ತಿಗಳಿಗಿಂತ ಮೂರು ಪಟ್ಟು ಹೆಚ್ಚು ಗಂಭೀರ ಅನಾರೋಗ್ಯಕ್ಕೊಳಗಾಗುವ ಸಾಧ್ಯತೆಯಿದೆ.

ಭಾರತದ ಆಸ್ಪತ್ರೆಗಳಲ್ಲಿ ದಾಖಲಾಗುವ ಪ್ರತಿ ಐದು ರೋಗಿಗಳಲ್ಲಿ ಒಬ್ಬರು ನೇರವಾಗಿ ಮದ್ಯ ವ್ಯಸನಕ್ಕೆ ಸಂಬಂಧಿಸಿದವರಾಗಿತ್ತಾರೆ. ಮದ್ಯ ವ್ಯಸನ ಮಾಡುವವರು ಹಿಂಸೆಗಳಲ್ಲಿ ತೊಡಗುವ ಸಾಧ್ಯತೆ ಹೆಚ್ಚು, ಅದರಲ್ಲೂ ಅವರ ಸಂಗಾತಿಗಳೊಂದಿಗೆ ಈ ಸಾಧ್ಯತೆ ಅಧಿಕ. ಈ ರೀತಿಯ ಹಿಂಸೆಯು ದೈಹಿಕವಾಗಿ, ಮಾನಸಿಕವಾಗಿ, ಲೈಂಗಿಕವಾಗಿ ಅಥವಾ ಆರ್ಥಿಕವಾಗಿಯೂ ಕೂಡ ನಡೆಯಬಹುದು.

ಮದ್ಯಪಾನ ವ್ಯಸನಕ್ಕೆ ದಾಸರಾದವರು ಆತ್ಮಹತ್ಯೆ ಪ್ರಯತ್ನ ಮಾಡಬಹುದು ಅಥವಾ ಅಪಾಯಕಾರಿಯಾದ ಲೈಂಗಿಕ ವರ್ತನೆ ತೋರಬಹುದು ಅಥವಾ ಹೆಚ್.ಐ.ವಿ ಸೋಂಕು, ಕ್ಷಯ, ಅನ್ನನಾಳದ ಕ್ಯಾನ್ಸರ್, ಲಿವರ್ ಸಮಸ್ಯೆ ಮತ್ತು ಕರುಳಿನ ಹುಣ್ಣುಗಳಿಗೆ ಒಳಗಾಗಬಹುದು.

ಮಾದಕ ವಸ್ತು ಮತ್ತು ಮದ್ಯವು ಮಾನವನ ಆರೋಗ್ಯದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ?

**ದೀರ್ಘಕಾಲದ ಮದ್ಯ ಸೇವನೆಯಿಂದ ಕೆಳಗೆ ಹೇಳಲಾದ ಸಮಸ್ಯೆಗಳು ಉದ್ಭವಿಸಬಹುದು:**

**- ಲಿವರ್ ಸಮಸ್ಯೆ**
**- ಭ್ರೂಣಕ್ಕೆ ತೊಂದರೆ**
**- ಖಿನ್ನತೆ ಅಥವಾ ತೀವ್ರತರ ಮಾನಸಿಕ ಕಾಯಿಲೆ**
**- ಕಿರಿಕಿರಿ ಅಥವಾ ಮನಸ್ಥಿತಿ ಬದಲಾವಣೆ**
**- ಅಧಿಕ ರಕ್ತದೊತ್ತಡ**
**- ಕ್ಯಾನ್ಸರ್‌ನಿಂದಾಗಬಹುದು ಅಪಾಯದ ಹೆಚ್ಚಳ**
**- ಹೃದಯ ಸ್ನಾಯುಗಳ ದೌರ್ಬಲ್ಯ ಮತ್ತು**
**- ಪಾರ್ಶ್ವವಾಯುವಿನ ತೊಂದರೆ**
**- ಅಜೀರ್ಣ ತೊಂದರೆಗಳು**
**- ಲೈಂಗಿಕ ದೌರ್ಬಲ್ಯ**
**- ಅಕಾಲಿಕ ಮುಪ್ಪು**

**ವ್ಯಸನವನ್ನು ಸೂಚಿಸುವ ಇನ್ನಿತರೆ ಕೆಲವು ಸೂಚಕಗಳು :**

ವ್ಯಕ್ತಿಯು ಮಾದಕ ವಸ್ತು ಮತ್ತು ಮದ್ಯದ ಬಗ್ಗೆ ಯಾವಾಗಲು ಯೋಚಿಸುತ್ತಿದ್ದರೆ : (ನಾನು ಮತ್ತೆ ಯಾವಾಗ ಕುಡಿಯುತ್ತೇನೆ / ಧೂಮಪಾನ ಮಾಡುತ್ತೇನೆ. ಇದರ ಬದಲಿಗೆ ಏನನ್ನು ತೆಗೆದುಕೊಳ್ಳಲಿ, ಅದನ್ನು ಎಲ್ಲಿಂದ ಪಡೆಯಲಿ, ಹೇಗೆ ಪಡೆಯಲಿ ? ಇತ್ಯಾದಿ ಚಿಂತನೆಗಳು)

**ವಿತ್ ಡ್ರಾವೆಲ್ ಲಕ್ಷಣಗಳು :** ವ್ಯಕ್ತಿಯು ಒಂದಷ್ಟು ದಿನ ಮಾದಕ ವಸ್ತುಗಳನ್ನು ಸೇವಿಸದೇ ಇದ್ದಾಗ ಅವರಲ್ಲಿ ನಡುಕ, ಕಿರಿಕಿರಿ, ತೀವ್ರ ಬಯಕೆ ಉಂಟಾಗಿ ಮಾನಸಿಕ ಹಾಗೂ ಭಾವನಾತ್ಮಕ ಅಂಶಗಳ ಮೇಲೆ ಪರಿಣಾಮ ಬೀರುತ್ತದೆ.

**ನಿಯಂತ್ರಣದ ಕೊರತೆ :** ಇಡೀ ದಿನ ಮಾದಕ ವಸ್ತುಗಳನ್ನು ತೆಗೆದುಕೊಳ್ಳದೇ ಇರಬೇಕೆಂದು ನಿರ್ಧರಿಸಿ, ಅದಕ್ಕೆ ಬದ್ಧರಾಗದೇ ವಿಫಲವಾಗುವುದು.

**ಬಯಕೆ :** ಮಾದಕ ವಸ್ತುಗಳನ್ನು ತೆಗೆದುಕೊಳ್ಳುವ ತೀವ್ರವಾದ ಬಯಕೆ

ನಿರಂತರ ಸೇವನೆಯಿಂದ ತನಗೆ ಹಾಗೂ ಸುತ್ತ - ಮುತ್ತಲಿನವರಿಗೆ ತೊಂದರೆಯಾಗುವುದು ತಿಳಿದಿದ್ದೂ ಅದನ್ನು ಮುಂದುವರೆಸುವುದು.

**ವ್ಯಸನಕ್ಕೆ ಚಿಕಿತ್ಸೆ:**

'ಆಪ್ತ-ಸಮಾಲೋಚನೆ ಪಡೆದು ವ್ಯಸನದಿಂದ ಮುಕ್ತರಾಗಬಹುದು'

ಮದ್ಯ ಸೇವನೆಯಿಂದ ಹೊರಬರುವ ಮೊದಲ ಹೆಜ್ಜೆಯೆಂದರೆ, ನಿಮಗೆ ತೊಂದರೆಯಿದೆ ಎನ್ನುವುದನ್ನು ಒಪ್ಪಿಕೊಳ್ಳುವುದು ಮತ್ತು ಸಹಾಯ ಪಡೆಯುವುದು, ವ್ಯಸನವು ಮಧುಮೇಹ ಅಥವಾ ಅಧಿಕ ರಕ್ತದೊತ್ತಡದಂತೆ ನಿರಂತರವಾಗಿ ಕಾಡುವ ಮತ್ತೆ ಮತ್ತೆ ಮರುಕಳುಹಿಸಬಹುದಾದ ಅಸ್ವಸ್ಥತೆ ಚಿಕಿತ್ಸೆಯ ನಂತರ ವ್ಯಸನ ಮರುಕಳುಹಿಸಿತು. ಎಂದರೆ ಚಿಕಿತ್ಸೆ ವಿಫಲವಾಯಿತೆಂದಲ್ಲಾ ಬದಲಿಗೆ ಆ ವ್ಯಕ್ತಿಗೆ ಮಾದಕ ವಸ್ತುವಿನ ವ್ಯಸನದಿಂದ ಹೊರಬರಲು ಹೆಚ್ಚಿನ ಸಹಾಯದ ಅಗತ್ಯವಿದೆ ಎಂದರ್ಥ.

**ಮದ್ಯವ್ಯಸನದ ಚಿಕಿತ್ಸೆ ಗುರಿಗಳು :** ರೋಗಿಯು ಮದ್ಯವನ್ನು ಬಳಸದಂತೆ ತಡೆಯುವುದು ಮತ್ತು ಮದ್ಯಮುಕ್ತವಾದ ಅವರು ಇಚ್ಚಿಸಿದ ಹೊಸ ಜೀವನ ಶೈಲಿಯನ್ನು ರೂಢಿಸಿಕೊಳ್ಳಲು ಸಹಾಯ ಮಾಡುವುದು.

ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರ - ಸಮುದಾಯ ಆರೋಗ್ಯ ಕೇಂದ್ರವನ್ನು ಸಂಪರ್ಕಿಸಿ ಅಥವಾ ಆರೋಗ್ಯ ಸಹಾಯವಾಣಿ 104 ಮತ್ತು ಟೆಲಿ ಮನಸ್ 14416 ಕ್ಕೆ ಕರೆಮಾಡಿ.



**- ಸಂತೋಷ್ ಕುಮಾರ್ ಎಂ.**
ಸೈಕಿಯಾಟ್ರಿಕ್ ಸೋಶಿಯಲ್ ವರ್ಕರ್
ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ದಾವಣಗೆರೆ, ಮೊ : 9739745816

# ಅನಾಥರ ಬಾಳಿಗೆ ಬೆಳಕಾದ ಗಾನಯೋಗಿ...

ಗದುಗಿನ ಪಂಚಾಕ್ಷರಿ ಗವಾಯಿಗಳು ಕನ್ನಡ ನಾಡಿನಲ್ಲಿ ಮನೆಮಾತು. ಪ್ರಸಿದ್ಧ ಗಾನ ಯೋಗಿ, ಸಂಗೀತಸಾಗರ, ಅಂಧರ, ಅನಾಥರ ಬಾಳಿಗೆ ಬೆಳಕಾದ ಪುಣ್ಯ ಪುರುಷ ಇವರು. ಸರ್ಕಾರ ಅಥವಾ ವಿಶ್ವವಿದ್ಯಾನಿಲಯ ಮಾಡದಂತಹ ಕಾರ್ಯವನ್ನು ಮಾಡಿ ತೋರಿಸಿದ ಕ್ರಿಯಾಶೀಲ, ಸೃಜನಶೀಲ ವ್ಯಕ್ತಿತ್ವ ಇವರದು. ಗದುಗಿನ ಪ್ರಸಿದ್ಧ ಸಂಗೀತ ಆಶ್ರಮವಾದ ಶ್ರೀ ವೀರೇಶ್ವರ ಪುಣ್ಯಾಶ್ರಮದ ಸಂಸ್ಥಾಪಕರು.

**ಜನನ:** ಇವರು ಜನಿಸಿದ್ದು ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಕಾಡಶೆಟ್ಟಿ ಹಳ್ಳಿಯಲ್ಲಿ ಫೆಬ್ರವರಿ 2, 1892 ರಂದು. ತಂದೆ ಗುರುಪಾದಯ್ಯ, ತಾಯಿ ನೀಲಮ್ಮ, ಇವರ ಹುಟ್ಟು ಹೆಸರು ಗದಿಗೆಯ್ಯ. ಇವರ ಅಣ್ಣ ಗುರುಬಸಯ್ಯ. ಇಬ್ಬರೂ ಹುಟ್ಟು ಕುರುಡರು. ಸ್ಥಳೀಯವಾಗಿ ಸಂಗೀತ ಶಿಕ್ಷಣ ಪಡೆದು ಶ್ರೀ ಹಕ್ಕಲಬಸವೇಶ್ವರ ಜಾತ್ರೆಯಲ್ಲಿ ಹಾಡುತ್ತಿದ್ದ ಇವರನ್ನು ಪೂಜ್ಯ ಹಾನಗಲ್ ಕುಮಾರಸ್ವಾಮಿಗಳು ಗುರುತಿಸಿ, ಆಶ್ರಯ ನೀಡಿದರು.

**ಸಂಗೀತ ಶಿಕ್ಷಣ :** ಹಾನಗಲ್ ಶ್ರೀಗಳು ಹಳ್ಳಿ ಹಳ್ಳಿಗಳಲ್ಲಿ ಭಿಕ್ಷೆ ಎತ್ತಿ 'ನೆಲವಿಗಿ'ಯಲ್ಲೊಂದು ಶಿವಯೋಗಮಂದಿರ ಸ್ಥಾಪಿಸಿ, ಇತರೆ ಹುಡುಗರ ಜೊತೆಗೆ ಈ ಇಬ್ಬರು ಸಹೋದರರು ಸಂಗೀತಾಭ್ಯಾಸ ಮಾಡುತ್ತಿದ್ದಾಗ ಅಣ್ಣ ಗುರುಬಸಯ್ಯ ಕಾಲರಾ ರೋಗದಿಂದ ಮರಣವನ್ನಪ್ಪಿದರು. ಗದಿಗೆಯ್ಯನಿಗೆ ಹದಿನೆಂಟು ವರ್ಷವಾದಾಗ ಮೈಸೂರಿನಲ್ಲಿ ಗೌರಿಶಂಕರ ಸ್ವಾಮಿಗಳಲ್ಲಿ ಕರ್ನಾಟಕ ಸಂಗೀತ ವಿದ್ಯಾಭ್ಯಾಸವಾಯಿತು. ನಾಲ್ಕು ವರ್ಷ ಮೈಸೂರಿನಲ್ಲಿ ಜೋಳಿಗೆ ಹಿಡಿದು ಹೊಟ್ಟೆ ತುಂಬಿಸಿಕೊಂಡ ಗದಿಗೆಯ್ಯ ಬಳಿಕ ಬಾಗಲಕೋಟೆಯಲ್ಲಿ ನಡೆಯುತ್ತಿದ್ದ ಅಖಿಲ ಭಾರತ ವೀರಶೈವ ಮಹಾಸಭೆಯ ಅಧಿವೇಶನದಲ್ಲಿ ಶ್ರೀ ಕುಮಾರಸ್ವಾಮಿಗಳಿಂದ 'ಪಂಚಾಕ್ಷರಿ ಗವಾಯಿ' ಎಂದು ಉದ್ಘೋಷಿತರಾದರು. ಪುನಃ ನಾಲ್ಕು ವರ್ಷ ಹಿಂದುಸ್ಥಾನಿ ಸಂಗೀತ ಅಭ್ಯಸಿಸಿ ಉಭಯ ಸಂಗೀತ ಪಂಡಿತರಾದರು. ಸಂಗೀತದ ಮೂಲಕವೇ 'ಸಮಾಜ ಸೇವೆ' ಮಾಡಲು ಬಯಸಿದ್ದ ಪಂಚಾಕ್ಷರಿ ಗವಾಯಿಗಳು ಕಂಚಗಲ್ ಬಿದಿರೆ ಗ್ರಾಮದ ಪ್ರಭುಕುಮಾರ ಶಿವಾಚಾರ್ಯರಿಂದ ಶಿವದೀಕ್ಷೆ ಪಡೆದು ಅಧ್ಯಾತ್ಮ ಮಾರ್ಗದಲ್ಲಿ ಮುನ್ನಡೆದರು.

**ಸಂಗೀತ ಪ್ರಚಾರ :** ಪಂಚಾಕ್ಷರಿ ಗವಾಯಿಗಳು ನಾಡಿನಾದ್ಯಂತ ಸಂಚರಿಸುತ್ತಾ ಒಂದು ಸಂಚಾರಿ ಪಾಠಶಾಲೆಯನ್ನೇ ಪ್ರಾರಂಭಿಸಿದರು. 1944 ರಲ್ಲಿ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ನಿಡಗುಂದಿ ಕೊಪ್ಪದಲ್ಲಿ 'ಶಿವಯೋಗ ಮಂದಿರ' ಸ್ಥಾಪಿಸಿದರು. ಶಾಖೆಯಾಗಿ ಸಂಗೀತ ಶಾಲೆ ಆರಂಭಿಸಿ, ಕನ್ನಡ ಮತ್ತು ಸಂಸ್ಕೃತ ಬೋಧಿಸುತ್ತಾ ಸಂಗೀತವನ್ನು ಕಲಿಸುತ್ತಿದ್ದರು. ಇವರ ಶಿಷ್ಯರ ಬಳಗದಲ್ಲಿ ಉತ್ತರಾಧಿಕಾರಿಯಾಗಿ ದೊರೆತವರು ಪುಟ್ಟರಾಜ ಗವಾಯಿಗಳು. ಸಂಗೀತ ಶಾಲೆಗಳ ಖರ್ಚು ತೂಗಿಸಲು ನಾಟಕ ಕಂಪನಿ ಆರಂಭಿಸಿ, ಕೈ ಸುಟ್ಟುಕೊಂಡರು. ಈ ಸಂದರ್ಭದಲ್ಲಿ 1930ರಲ್ಲಿ ಪಂಚಾಕ್ಷರಿ ಗವಾಯಿಗಳ ರೂವಾರಿಯಾಗಿದ್ದ ಹಾನಗಲ್ ಕುಮಾರಸ್ವಾಮಿಗಳು ಲಿಂಗೈಕ್ಯರಾದರು. ಇದೇ ಸಮಯದಲ್ಲಿ ಬರಗಾಲ ಬಿದ್ದಿದ್ದರಿಂದ ಪಂಚಾಕ್ಷರಿ ಗವಾಯಿಗಳು ತಮ್ಮ ಶಿಷ್ಯರನ್ನು ಬದುಕಿಸಲು ಪಟ್ಟಪಾಡು ಅಷ್ಟಿಷ್ಟಲ್ಲ. ಸಂದರ್ಭೋಚಿತ ನೆರವು ನೀಡಿದವರು ಬಸರಿಗಿಡದ ವೀರಪ್ಪನವರು. ಇವರು ಗವಾಯಿಗಳಿಗಾಗಿ ತಮ್ಮ ಜಾಗದಲ್ಲಿಯೇ ಒಂದು ತಗಡಿನ ಶೆಡ್ ಹಾಕಿಸಿ, ಧನ-ಧಾನ್ಯದ ಸಹಾಯ ನೀಡಿ ಸಂಗೀತ ಶಾಲೆಗೆ ನೆರವಾದರು. ಈ ಸಂಗೀತ ಶಾಲೆಗೆ ಗವಾಯಿಗಳು 'ಶ್ರೀ ವೀರೇಶ್ವರ ಪುಣ್ಯಾಶ್ರಮ' ಎಂದು ಹೆಸರಿಟ್ಟರು.



**(ಗಾನಯೋಗಿ ಪಂಚಾಕ್ಷರಿಗಳ ಪುಣ್ಯ ದಿನದ ಸ್ಮರಣೆ)**

**ಶ್ರೀ ವೀರೇಶ್ವರ ಪುಣ್ಯಾಶ್ರಮ :** ಸಂಚಾರಿ ಸಂಗೀತ ಶಾಲೆ ನಾಡಿನುದ್ದಗಲಕ್ಕೂ ಸಂಚರಿಸಿ, 1933ರಲ್ಲಿ ರಾವ್‌ಬಹದ್ದೂರ ಮಾನವಿ ಹಾಗೂ ಬಸರಿಗಿಡದ ವೀರಪ್ಪನವರ ಸಹಾಯ, ಸಹಕಾರದಿಂದ ಗದುಗಿನಲ್ಲಿ "ಶ್ರೀ ವೀರೇಶ್ವರ ಪುಣ್ಯಾಶ್ರಮ" ಆರಂಭಗೊಂಡಿತು. ಅಂದಿನಿಂದ ಇಂದಿನವರೆಗೆ ಸರ್ಕಾರ ಮಾಡದಂತಹ ಕಾರ್ಯ ವನ್ನು ಈ ಪುಣ್ಯಾಶ್ರಮ ಮಾಡುತ್ತಾ ಬಂದಿರುವುದು ಶ್ಲಾಘನೀಯ. ಇದಕ್ಕೆಲ್ಲ ಮೂಲ ಚೇತನಶಕ್ತಿ ಪಂಚಾಕ್ಷರಿ ಗವಾಯಿಗಳು. ಅವರ ನಂತರ ಪುಟ್ಟರಾಜ ಗವಾಯಿಗಳು. ಈಗ ಪುಣ್ಯಾಶ್ರಮ ಕಲ್ಲಯ್ಯಜ್ಜನವರ ಮಾರ್ಗದರ್ಶನದಲ್ಲಿ ನಡೆಯುತ್ತಿದೆ.

**ಅನಾಥರಿಗೆ ಬೆಳಕಾದ ಪುಣ್ಯಾಶ್ರಮ :** ಸುಮಾರು ಏಳು ದಶಕಗಳ ಕಾಲ ಅಂಧ-ಅನಾಥರ, ಅಂಗವಿಕಲರ ಬಾಳಿಗೆ ಬೆಳಕಾಗಿ ಅವಿರತ ಸೇವೆ ಮುಂದುವರೆಸಿದೆ. ಪ್ರಸ್ತುತ ಸುಮಾರು 600ಕ್ಕೂ ಹೆಚ್ಚು ಮಕ್ಕಳಿಗೆ ಸಂಗೀತ, ವಿದ್ಯೆ, ತ್ರಿವಿಧ ದಾಸೋಹ ಕಾರ್ಯ ಮುಂದುವರೆಸಿದೆ. ಬೆಳಿಗ್ಗೆ ಹಾಗೂ ಸಂಜೆ 4 ತಾಸು ಮಕ್ಕಳಿಗೆ ಪಾಠ, ಭಕ್ತರಿಗೆ ಪುರಾಣ ಪಠಣ ಹಾಗೂ ಪೌರಾಣಿಕ ನಾಟಕಗಳ ಮಾರ್ಗದರ್ಶನ, ಆಶ್ರಮಕ್ಕೆ ಬಂದ ಭಕ್ತರ ಯೋಗಕ್ಷೇಮದಂತಹ ಜ್ಞಾನ ದಾಸೋಹ - ಅನ್ನ ದಾಸೋಹ ಕಾರ್ಯ ನಡೆಯುತ್ತಿದೆ. ಪುಣ್ಯಾಶ್ರಮದ ಆಸ್ತಿ ಎಂದರೆ ಹಾನಗಲ್ ಕುಮಾರಸ್ವಾಮಿಗಳು ನೀಡಿದ ದಂಡ ಮತ್ತು ಜೋಳಿಗೆ, ಲಕ್ಷಾಂತರ ಭಕ್ತರು, ಸಾವಿರಾರು ಅಭಿಮಾನಿಗಳು, ಆಶ್ರಮದ ಸಾವಿರಾರು ವಿದ್ಯಾರ್ಥಿಗಳು ಹಾಗೂ ಆಶ್ರಮದಲ್ಲಿ ಕಲಿತು ಹೋಗಿ ನಾಡಿನಾದ್ಯಂತ ಇರುವ ಸಂಗೀತ ದಿಗ್ಗಜರು.

**ಪುಣ್ಯಾಶ್ರಮದ ಪೂಜ್ಯರು :** ಪಂಚಾಕ್ಷರಿ ಗವಾಯಿಗಳು ವೀರೇಶ್ವರ ಪುಣ್ಯಾಶ್ರಮವನ್ನು ಕಟ್ಟಿ ಬೆಳೆಸಿದರು (1914-1944). ನಂತರ ಪುಟ್ಟರಾಜ ಗವಾಯಿಗಳು (1944-2010) ಪುಣ್ಯಾಶ್ರಮವನ್ನು ಉನ್ನತ ಸ್ಥಿತಿಗೆ ಕೊಂಡೊಯ್ದರು. 2010 ರಿಂದ ಪ್ರಸ್ತುತದಲ್ಲಿ ಕಲ್ಲಯ್ಯಜ್ಜನವರು ಪುಣ್ಯಾಶ್ರಮದ ಮಹಾಕಾರ್ಯಗಳನ್ನು ಮುಂದುವರೆಸಿದ್ದಾರೆ.

ಪಂಚಾಕ್ಷರಿ ಗವಾಯಿಗಳು ಸದಾ ಖಾದಿಯನ್ನೇ ಧರಿಸುತ್ತಿದ್ದರು. ದೇಶ ವ್ಯಾಪಿ ಸಂಚಾರದಲ್ಲಿಯೂ ಕನ್ನಡದಲ್ಲಿಯೇ ಗಾಯನ ಮಾಡಿ ಕನ್ನಡ ಪ್ರೇಮ ಮೆರೆದರು. ಅನಾರೋಗ್ಯರಾಗಿ ಉದರ ರೋಗದಿಂದ ಬಳಲುತ್ತಿರುವಾಗ ಆಯುರ್ವೇದ ಹೊರತಾಗಿ, ಇಂಗ್ಲಿಷ್ ವೈದ್ಯ ಪದ್ಧತಿಗೆ ಒಪ್ಪಲಿಲ್ಲ. ಕೊನೆಗೆ ಇದೇ ರೋಗಕ್ಕೆ ಬಲಿಯಾಗಿ ಜೂನ್, 11, 1944 ರಂದು ಪಂಚಾಕ್ಷರಿ ಗವಾಯಿಗಳು ವಿಶ್ವ ಸಂಗೀತದಲ್ಲಿ ಲೀನವಾದರು, ನಿಧನ ಹೊಂದಿದರು. ಇಂತಹ ಮಹಾನ್ ಚೇತನವನ್ನು, ಸಮಾಜ ಸೇವಕನನ್ನು, ಗಾನಯೋಗಿಯನ್ನು ಕನ್ನಡನಾಡು ಕಳೆದು ಕೊಂಡಿತು. ಸಾವಿರಾರು ಅಂಧರ, ಅನಾಥರ ಬಾಳಿಗೆ ಬೆಳಕು ನೀಡಿದ ಈ ಜ್ಯೋತಿಯನ್ನು ಮರೆಯುವುದು ಅಸಾಧ್ಯದ ಮಾತು. ಅವರ ಪುಣ್ಯ ದಿನದ ಸ್ಮರಣೆ ಸದಾ ನಮ್ಮ ಹೃದಯದಲ್ಲಿ ಮನೆ ಮಾಡಿದೆ.



**- ಡಾ. ಗಂಗಾಧರಯ್ಯ ಹಿರೇಮಠ,** ವಿಶ್ರಾಂತ ಪ್ರಾಧ್ಯಾಪಕರು,
ದಾವಣಗೆರೆ. ಮೊ: 9880093613


**ತಕ್ಷಣ ಬೇಕಾಗಿದ್ದಾರೆ**
DTDC ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಬೈಕ್ ಇರುವ ಹುಡುಗರು ಬೇಕಾಗಿದ್ದಾರೆ.
ಮೊ. 97385-23711

**ಸೈಟುಗಳು ಮಾರಾಟಕ್ಕಿವೆ**
ಅಮರಾವತಿ ಹೌಸಿಂಗ್ ಕಾಲೋನಿ ಮತ್ತು ಕರ್ನಾಟಕ ಗೃಹ ಮಂಡಳಿ ಪಕ್ಕ HRM ಬಡಾವಣೆಯ ಸೈಟುಗಳು ನೇರ ಮಾಲಿಕರಿಂದ ಮಾರಾಟಕ್ಕಿವೆ.
98809 33630

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಮಹಿಳಾ ಅಭ್ಯರ್ಥಿಗಳು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

**ಬೇಕಾಗಿದ್ದಾರೆ**
ಕಿರಾಣಿ ಅಂಗಡಿ ಕೆಲಸಕ್ಕೆ ಅನುಭವ ಉಳ್ಳವರು ಬೇಕಾಗಿದ್ದಾರೆ.
**ಶ್ರೀ ಗುರು ಕೊಟ್ಟೂರೇಶ್ವರ ಪ್ರಾವಿಜನ್ ಸ್ಟೋರ್,** ಐಟಿಐ ಕಾಲೇಜ್ 60 ಅಡಿ ರೋಡ್ ನಿಟ್ಟುವಳ್ಳಿ, ದಾವಣಗೆರೆ.
95919 21004, 73381 00402

**ಸೈಟುಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಲೇಔಟ್ 35x51 (ಪಶ್ಚಿಮ) ಡಾಲರ್ಸ್ ಕಾಲೋನಿ ಎದುರುಗಡೆ 30x54 (ಉತ್ತರ) ಶಿವಕುಮಾರ ಬಡಾವಣೆ, 30x40 (ಪೂರ್ವ) ಸರಸ್ವತಿ ನಗರ, 30x40 (ಪಶ್ಚಿಮ) ಆಂಜನೇಯ ಬಡಾವಣೆ 35x45 (ದಕ್ಷಿಣ) ವಿನಾಯಕ ಬಡಾವಣೆ 40x50 ಪಶ್ಚಿಮ ದಕ್ಷಿಣ ಕಾರ್ನರ್
95385 65909

**ಬೇಕಾಗಿದ್ದಾರೆ**
ಎಲಿವೇಟರ್ ಕಂಪನಿ ಗೆ ಸೇಲ್ಸ್ ಎಕ್ಸಿಕ್ಯೂಟಿವ್ ಮತ್ತು ಸರ್ವೀಸ್ technician ಬೇಕಾಗಿದ್ದು, ಯೋಗ್ಯ ಸಂಬಳದೊಂದಿಗೆ ಇನ್ಸೆಂಟಿವ್ ನೀಡಲಾಗುವುದು. (ಅನುಭವ ಉಳ್ಳವರಿಗೆ ಆದ್ಯತೆ)
ವಿದ್ಯಾರ್ಹತೆ : ಯಾವುದೇ ಪದವಿ. ಸಂಪರ್ಕಿಸಿ.
95380 91888, 95380 72888

**ಅಡುಗೆ ಕೆಲಸದವರು ಬೇಕಾಗಿದ್ದಾರೆ**
ಎಸ್.ಎಸ್. ಲೇಔಟ್ 'ಬಿ' ಬ್ಲಾಕ್, 3ನೇ ಮುಖ್ಯರಸ್ತೆಯಲ್ಲಿರುವ ಮನೆಗೆ, ಮನೆ ಕೆಲಸಕ್ಕೆ ಮತ್ತು ಅಡುಗೆ ಮಾಡುವುದರಲ್ಲಿ ನುರಿತ ಮಹಿಳೆ ಬೇಕಾಗಿದ್ದಾರೆ.
99807 05864

**ಮಲೇಬೆನ್ನೂರಿನಲ್ಲಿ ಸೈಟ್ ಮಾರಾಟಕ್ಕಿದೆ**
ಪಟ್ಟಣದ ಬಸವೇಶ್ವರ ಬಡಾವಣೆಯಲ್ಲಿ 30x50 ಅಳತೆಯ ಖಾಲಿ ನಿವೇಶನ ಮಾರಾಟಕ್ಕಿದೆ. ಸಂಪರ್ಕಿಸಿ :
99459 69585

**ಬೇಕಾಗಿದ್ದಾರೆ**
ಕಾಫಿ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತಿಯುಳ್ಳವರು ಸೂಕ್ತ ದಾಖಲೆಗಳೊಂದಿಗೆ ನೇರವಾಗಿ ಸಂಪರ್ಕಿಸಿ
ಎ.ಎನ್.ಎಸ್. ಫುಡ್ಸ್
ಮಂಡಿಪೇಟೆ, ದಾವಣಗೆರೆ.
94482 72734

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**CAFE STAFF REQUIRED**
FOR A CAFE IN Anjaneya Layout, Basic Salary Starts from 10,000
Qualification : 10th/12th Pass
93804 69079

**ಹೋಟೆಲ್ ಸಾಮಾನುಗಳು ಬೇಕಾಗಿದೆ**
1) ಫ್ರಿಜ್ 2) ಸ್ಟೀಲ್ ಸಿಂಕ್ 3) ಸ್ಟವ್ ಮತ್ತು ಕೌಂಟರ್ ಸಂಪರ್ಕಿಸಿ.
97392 94066, 87110 04905

**ಟೀಚರ್ ಬೇಕಾಗಿದ್ದಾರೆ**
ಟ್ಯೂಷನ್ ಮಾಡಲು 6th ಮತ್ತು 9th ಕ್ಲಾಸ್ ಮಕ್ಕಳಿಗೆ ಮನೆಗೇ ಬಂದು ಪಾಠ ಮಾಡಲು ಲೇಡಿ ಟೀಚರ್ ಬೇಕಾಗಿದ್ದಾರೆ.
096068 64777

**WANTED**
Security Field Officer For Davanagere.
Salary : 12000-15000 + Travel Allowance
88678 53961, 91130 53483

**CHANGE OF NAME**
I am **Manjunath H.R.** S/o Rangappa, N. resident @ #852/18,1st Main,10th cross, Saraswati Nagar, A Block, Near Park, Davangere -577004. My old name is **Manjunatha H.R.** but my new name is **Manjunath H.R.** I am state that the above said two names are me only none one else sworn before Notary Public on 17.06.2024.
S/d- **Manjunath H.R.**

**CHANGE OF NAME**
I **VIDYA A PATIL** (VIDYA ANUP PATIL) previously called VIDYA S GUNJETTI (VIDYA SHIVAYOGEPPA GUNJETTI) Resident of 3338 15th main, 5th cross near Bapuji High School M.C.C. `B' Block Davangere 577004 have changed my name as **VIDYA A PATIL** vide affidavit dated 25-06-2024 sworn before notary I.P Brahamakumar Davangere. Henceforth all my transaction and dealings will be in my new name **VIDYA A PATIL**

**ಸೈಟ್ ಮಾರಾಟಕ್ಕಿದೆ**
ಗ್ಲಾಸ್ ಹೌಸ್ ಹತ್ತಿರ ದಕ್ಷಿಣ ಮುಖ ಸೈಟ್ ಸೇಲ್‌ಗೆ ಇದೆ. 30x36. ಲೊಕೇಷನ್ ಚೆನ್ನಾಗಿದೆ.
99862 34416

**SITE FOR SALE**
East facing site, 40ftx106ft Road 40ft width SS Layout , B Block, 3rd Main Road, Davangere
74831 70877

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಬ್ರಾಹ್ಮಣ ಲಿಂಗಾಯತ ವರ ಬೇಕಾಗಿದೆ**
ಬ್ರಾಹ್ಮಣ ವಧು, ವಯಸ್ಸು 27, SSLC ಕಲಿತಿರುವ / ವಯಸ್ಸು 29, PUC / ವಯಸ್ಸು 33, SSLC / ವಯಸ್ಸು 40, PUC ಕಲಿತಿರುವ ವಧುವಿಗೆ ವರ ಬೇಕಾಗಿದೆ. (ಕೃಷಿಕರು, ಪುರೋಹಿತರು, ಅಡುಗೆಯವರು ಇನ್ನಿತರೆ ಉದ್ಯೋಗದಲ್ಲಿರುವ ಆದಾಯವಿರುವ ಸದ್ಗುಣವಂತ ವರ ಸಂಪರ್ಕಿಸಬಹುದು) ವಧು ವರಾನ್ವೇಷಣ ಕೇಂದ್ರ, ಕಂದಾವರ, ಮಂಗಳೂರು.
98806 85177

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಡಾಲರ್ಸ್ ಕಾಲೋನಿ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**ಮನೆ ಬಾಡಿಗೆಗಿದೆ**
ದಾವಣಗೆರೆ ಕೆ.ಬಿ ಬಡಾವಣೆಯಲ್ಲಿ ತ್ರಿಶೂಲ್ ಟಾಕೀಸ್ ಹಿಂಭಾಗದ ಕಿರುವಾಡಿ ಲೇಔಟ್ ನಲ್ಲಿ ಮೊದಲ ಮಹಡಿಯಲ್ಲಿ ಎಲ್ಲಾ ಸೌಕರ್ಯವಿರುವ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗಿದೆ. ಸಂಪರ್ಕಿಸಿ.
99801 48289, 98807 39392

**ENGINEERING DIPLOMA TUTIONS**
(FOR ALL BRANCHES)
ಸಮೃದ್ಧಿ ಅಕಾಡೆಮಿ
81472 62361

**NEET, K-CET Long Term**
ಬ್ಯಾಚ್‌ಗಳು ಪ್ರಾರಂಭ
ಸಮೃದ್ಧಿ ಅಕಾಡೆಮಿ
96202 62361

**ರೈತ ಬಾಂಧವರೇ**
ಅಡಿಕೆ ತೋಟದ ಕಳೆಗೆ ಸ್ಪ್ರೇ ಮಾಡುವ ಸಾವಯವ ಕಳೆನಾಶಕ ದೊರೆಯುತ್ತದೆ.
ಫೋ. : 98451 04109

**3 BHK HOUSE FOR RENT**
At Uttam Badavane, 1st Main, B ward No. 30 Avaragere Road, conatct No.
99015 64535, 94498 04535

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ , ದಾವಣಗೆರೆ-577002.
97402 58276

**Avoid Mosquiteos**
Mosquito Nets for doors & windows
**Sri Gowri Enterprises**
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಬೇಕಾಗಿದ್ದಾರೆ**
ACE TRACTOR SHOWROOM ಗಾಗಿ ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಆಕರ್ಷಕ ಸಂಭಾವನೆ ಮತ್ತು ಪ್ರತ್ಯೇಕ ಇನ್ಸೆಂಟಿವ್ ನೀಡಲಾಗುವುದು. ಅನುಭವವುಳ್ಳವರಿಗೆ ಪ್ರಥಮ ಆದ್ಯತೆ.
9916955111, 9448202030

**ಕಡಿಮೆ ಬೆಲೆಗೆ NA ಸೈಟುಗಳು ಮಾರಾಟಕ್ಕೆ ಇವೆ**
15x40= 600 ಅಡಿಗಳು ಉತ್ತರ ಅಭಿಮುಖ ಸೈಟುಗಳು. 7.5 ಲಕ್ಷಕ್ಕೆ ಮಾರಾಟಕ್ಕೆ. ಕೆಲವೇ ಸೈಟುಗಳು ಮಾರಾಟಕ್ಕಿವೆ. ಹೊಸ ಮನೆಗಳು ಬಾಡಿಗೆಗೆ ಇವೆ.
ವಿಳಾಸ : ಬಾಡಾ ಕ್ರಾಸ್ ಹತ್ತಿರ. ಸಂಪರ್ಕಿಸಿ :
80505 91277

**ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಮಾಡಲು ಪಿಯುಸಿ ಮುಗಿಸಿದ ಹುಡುಗರು ಬೇಕಾಗಿದ್ದಾರೆ.
M/s ಬಸವಶ್ರೀ ಸೋಲಾರ್ ಟೆಕ್ನಾಲಜೀಸ್
ನಂ. 43 ಹೆಚ್, ಎಸ್.ಜೆ.ಜೆ.ಎಂ. ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆ.
99001 42052

**WANTED TEACHERS**
Any degree with good communication English
Tatva School Davanagere
99641 10736

**ಜಲ್ಲಿ ಕ್ರಷರ್ ಭೋಗ್ಯಕ್ಕೆ ಅಥವಾ ಮಾರಾಟಕ್ಕಿದೆ**
ದಾವಣಗೆರೆಯಿಂದ 10 ಕಿ.ಮೀ. ದೂರದಲ್ಲಿ
91104 69802
98808 77197

**ಹೋಟೆಲ್ ಮಾರಾಟಕ್ಕಿದೆ**
ರೆಡಿ ಇರುವ ಬೆಣ್ಣೆ ದೋಸೆ ಹೋಟೆಲ್ ಮಾರಾಟಕ್ಕಿದೆ. ಮಳಿಗೆ ಬಾಡಿಗೆಗೆ ಇದೆ ಬಿಐಇಟಿ ರೋಡ್ .
99642 62725

**WANTED**
Freshers or Learners For Auditor Office
7760740760

**FIRST FLOOR SHOP FOR RENT**
For Office, Mini Bank Ready Made Garment Shop, Beauty Parlour Etc., (with Wash Room Fecility) N.R. Road, Davangere.
94483 69523

**ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ**
No. 1 ವಶೀಕರಣ ಸ್ಪೆಷಲಿಸ್ಟ್
ನೀವು ಇಷ್ಟಪಟ್ಟವರು ನಿಮ್ಮಂತಾಗಲು, ಮದುವೆ ವಿಳಂಬ, ದಾಂಪತ್ಯ ಸ್ತ್ರೀ-ಪುರುಷ ವಶೀಕರಣ, ನಿಮ್ಮ ಯಾವುದೇ ಸಮಸ್ಯೆಗಳನ್ನು 100% ಪರಿಹಾರ ಶತಃ ಸಿದ್ಧ.
(ಮನೆ) ಜಿ. ವಿ. ಭಟ್ಟರ್
2ನೇ ಹಂತ, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ
89716 99826

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**GIRIJA MAKEOVER**
ಗಿರಿಜಾ ಮೇಕ್ ಓವರ್
30 day's Basic to Advance Makeup training classes from certified makeup artist.
For more details contact
9481776305
Also contact for RENTAL OUTFITS.

# ಗ್ರಾಮೀಣದಲ್ಲಿ ಕುಡಿಯುವ ನೀರು ಪೂರೈಸುವುದು ಪಿಡಿಒ, ಕಿರಿಯ ಇಂಜಿನಿಯರ್‌ಗಳ ಜವಾಬ್ದಾರಿ

ದಾವಣಗೆರೆ, ಜೂ. 25 - ಗ್ರಾಮೀಣ ಪ್ರದೇಶದ ಜನರಿಗೆ ಶುದ್ದ ಕುಡಿಯುವ ನೀರು ಪೂರೈಕೆ ಮಾಡುವ ಜವಾಬ್ದಾರಿ ಆಯಾ ಗ್ರಾಮ ಪಂಚಾಯಿತಿ ಅಭಿವೃದ್ದಿ ಅಧಿಕಾರಿ ಹಾಗೂ ಕಿರಿಯ ಇಂಜಿನಿಯರ್‌ಗಳ ಜವಾಬ್ದಾರಿಯಾಗಿದ್ದು ಕಲುಷಿತ ನೀರು ಪೂರೈಕೆಯಾದಲ್ಲಿ ಇವರನ್ನೇ ಹೊಣೆಗಾರರನ್ನಾಗಿ ಮಾಡಲಾಗುತ್ತದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ. ಸುರೇಶ್ ಇಟ್ನಾಳ್ ಎಚ್ಚರಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮೊನ್ನೆ ನಡೆದ ನೀರು ಮತ್ತು ನೈರ್ಮಲ್ಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ 4ನೇ ಹಂತದ ಕಾಮಗಾರಿಗಳು ನಡೆಯುತ್ತಿದ್ದು, ಮನೆ ಮನೆಗೂ ನಲ್ಲಿಯನ್ನು ಅಳವಡಿಸುವ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ಈಗಾಗಲೇ ಜಲಜೀವನ್ ಮಿಷನ್ ಯೋಜನೆಯಡಿ ಗ್ರಾಮಗಳಲ್ಲಿ ಪೈಪ್ ಅಳವಡಿಸಲಾಗಿದ್ದು, ಮನೆ ಮನೆಗೆ ನಲ್ಲಿ ಸಂಪರ್ಕಕ್ಕೆ ಸಿವಿಪಿವಿಸಿ ಪೈಪ್ ಅಳವಡಿಕೆಗೆ ಸಿಸಿ ರಸ್ತೆ ಕಟ್ಟಿಂಗ್ ಮಾಡಲು ಮತ್ತು ಕೊಳವೆಬಾವಿಯಿಂದ ನೀರಿನ ಪೈಪ್‌ಲೈನ್ ಅಳವಡಿಕೆ ಮಾಡಲು 8 ಕಾಮಗಾರಿಗಳಿಗೆ ಸಮಿತಿಯು ಅನುಮೋದನೆ ನೀಡಿದೆ ಎಂದರು.

ಸಮಿತಿಯ ಮುಂದೆ 13 ಗ್ರಾಮಗಳಲ್ಲಿ ಸಿಸಿ ರಸ್ತೆ ಕಟಿಂಗ್ ಮಾಡಿ ನಲ್ಲಿ ಅಳವಡಿಕೆ, ಪೈಪ್‌ಲೈನ್ ಅಳವಡಿಕೆ, ಓವರ್‌ಹೆಡ್ ಟ್ಯಾಂಕ್‌ಗಳ ದುರಸ್ತಿ ಕಾಮಗಾರಿಗೆ ಅನುಮೋದನೆ ನೀಡಲು ಪರಿಶೀಲಿಸಲಾಯಿತು.

ಕೆಲವು ಕಾಮಗಾರಿಗಳು ಯೋಜಿತ ಕಾಮಗಾರಿಗಿಂತ ಅಂದಾಜು ಮೊತ್ತ ಹೆಚ್ಚಿದ್ದು ಸ್ಥಳ ಮಹಜರು ಮಾಡಿದ ನಂತರ ಅನುಮೋದನೆ ನೀಡಲು ಸಮಿತಿ ತೀರ್ಮಾನಿಸಿತು.

ಅನುಮೋದಿತ ಕಾಮಗಾರಿಗಳಲ್ಲಿ ನಲ್ಲಿ ಅಳವಡಿಕೆ, ವಿತರಣಾ ಪೈಪ್, ಟ್ಯಾಂಕ್ ರಿಪೇರಿ ಕೈಗೊಳ್ಳಲಾಗುತ್ತದೆ.



**ಅನುಮೋದನೆ ನೀಡಿದ ಗ್ರಾಮಗಳ ವಿವರ :** ಹೆಬ್ಬಾಳ, ಕಾಟೀಹಳ್ಳಿ, ನೀರ್ಥಡಿ ದ್ಯಾಮೇನಹಳ್ಳಿ, ಶ್ರೀರಾಮನಗರ, ಆಲೂರುಹಟ್ಟಿ, ಸಿದ್ದನೂರು, ಕೆರೆಯಾಗಲಹಳ್ಳಿ, ಆವರಗೊಳ್ಳ ಈ ಗ್ರಾಮಗಳ ಕಾಮಗಾರಿಗೆ ಅನುಮೋದನೆ ನೀಡಿ ಬೇತೂರು, ಗುಮ್ಮನೂರು ಕದರಪ್ಪನಹಟ್ಟಿ, ಗೊಲ್ಲರಹಳ್ಳಿ, ಹೊನ್ನೂರು, ಕಕ್ಕರಗೊಳ್ಳ ಆಂಜನೇಯ ಬಡಾವಣೆಯಲ್ಲಿನ ಕಾಮಗಾರಿಗೆ ಸ್ಥಳ ಪರಿಶೀಲನೆ ಮಾಡಿ ಅನುಮೋದನೆ ನೀಡಲು ತೀರ್ಮಾನಿಸಲಾಯಿತು.

**ಕುಡಿಯುವ ನೀರಿನ ಪರೀಕ್ಷೆ ಆಂದೋಲನ;** ಪಂಚಾಯಿತಿ ವ್ಯಾಪ್ತಿಯಲ್ಲಿನ ಗ್ರಾಮಗಳಿಗೆ ಪೂರೈಕೆ ಮಾಡುವ ಕುಡಿಯುವ ನೀರನ್ನು ಎಲ್ಲಾ ಹಂತಗಳ ಪರೀಕ್ಷೆಯನ್ನು ಕೈಗೊಳ್ಳಬೇಕಾಗಿದೆ. ಇದೊಂದು

**ನೀರು ಮತ್ತು ನೈರ್ಮಲ್ಯ ಸಮಿತಿ ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ. ಸುರೇಶ್ ಇಟ್ನಾಳ್**

ಆಂದೋಲನದ ರೀತಿಯಲ್ಲಿ ಪಂಚಾಯಿತಿ ಅಭಿವೃದ್ದಿ ಅಧಿಕಾರಿಗಳು ಹಾಗೂ ಗ್ರಾಮೀಣ ನೀರು ಸರಬರಾಜು ವಿಭಾಗದ ಅಧಿ ಕಾರಿಗಳು ಮಾಡಬೇಕಾಗಿದೆ.

ಕುಡಿಯುವ ನೀರಿನ ಪರೀಕ್ಷೆಗಾಗಿ ದಾವಣಗೆರೆ ಮತ್ತು ಚನ್ನಗಿರಿಯಲ್ಲಿ ಪ್ರಯೋಗಾಲಯಗಳಿವೆ. ಇಲ್ಲಿಗೆ ನೀರಿನ ಮಾದರಿಗಳನ್ನು ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿಸಬೇಕು. ನೀರಿನ ಮೂಲ, ಪೈಪ್‌ಲೈನ್, ಟ್ಯಾಂಕ್‌ಗಳಲ್ಲಿನ ನೀರಿನ ಮಾದರಿಯನ್ನು ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಬೇಕಾಗಿದೆ ಎಂದರು.

ಎಲ್ಲಾ ಗ್ರಾಮಗಳಲ್ಲಿ ಕುಡಿಯುವ ನೀರನ್ನು ಮುಂದಿನ ದಿನಗಳಲ್ಲಿ ಸತತವಾಗಿ ಒಂದು ವಾರಗಳ ಕಾಲ ಸಮಗ್ರವಾಗಿ ಪರಿಶೀಲನೆ ಮಾಡಿ ಪರೀಕ್ಷೆಗೆ ಒಳಪಡಿಸುವುದು, ಟ್ಯಾಂಕ್ ಸ್ವಚ್ಚ ಮಾಡಿ ಕ್ಲೋರಿನೇಷನ್ ಮಾಡಲು ಸೂಚನೆ ನೀಡಿ ಕಲುಷಿತ ನೀರು ಮಿಶ್ರಣವಾಗದಂತೆ ನೋಡಿಕೊಳ್ಳಬೇಕು.

ಒಂದು ವೇಳೆ ಕಲುಷಿತ ಕುಡಿಯುವ ನೀರಿನ ಪ್ರಕರಣಗಳು ಕಂಡು ಬಂದಲ್ಲಿ ಪಂಚಾಯಿತಿ ಅಭಿವೃದ್ದಿ ಅಧಿಕಾರಿ ಮತ್ತು ಗ್ರಾಮೀಣ ಕುಡಿಯುವ ನೀರು ಪೂರೈಕೆ ವಿಭಾಗದ ಕಿರಿಯ ಇಂಜಿನಿಯರ್‌ನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತದೆ ಎಂದರು.

ಸಭೆಯಲ್ಲಿ ಸಮಿತಿ ಸದಸ್ಯರಾದ ಹಿರಿಯ ಭೂ ವಿಜ್ಞಾನಿ ಬಸವರಾಜು, ವಾರ್ತಾ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಧನಂಜಯ ಹಾಗೂ ಕಾರ್ಯಪಾಲಕ ಇಂಜಿನಿಯರ್ ಸೋಮ್ಲಾನಾಯ್ಕ್ ಉಪಸ್ಥಿತರಿದ್ದರು.

## ಹಳೇಬಾತಿಯಲ್ಲಿ 'ಮಲೇರಿಯಾ ವಿರೋಧಿ ಮಾಸಾಚರಣೆ'



ದಾವಣಗೆರೆ, ಜೂ. 25 - ಹಳೇಬಾತಿ ಗ್ರಾಮ ಪಂಚಾಯತಿಗಳಲ್ಲಿ 'ಮಲೇರಿಯಾ ವಿರೋಧಿ ಮಾಸಾ ಚರಣೆ' ಕಾರ್ಯಕ್ರಮವನ್ನು ದೊಡ್ಡಬಾತಿ ಪಿ.ಹೆಚ್.ಸಿ. ವತಿಯಿಂದ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ಶ್ರೀಮತಿ ಸೀತಮ್ಮ, ಉಪಾಧ್ಯಕ್ಷರಾದ ಪುಷ್ಪ, ಆರೋಗ್ಯ ನಿರೀಕ್ಷಣಾಧಿಕಾರಿ ಮೇಘಾ ಮತ್ತಿತರರು ಪಾಲ್ಗೊಂಡಿದ್ದರು.

## ಮಾದಕ ವಸ್ತುವಿನ ವ್ಯಸನವನ್ನು ತಡೆಗಟ್ಟುವ ಕುರಿತು ದೊಡ್ಡಬಾತಿಯಲ್ಲಿ ಇಂದು ಕಾರ್ಯಾಗಾರ

ಅಂತರರಾಷ್ಟ್ರೀಯ ಮಾದಕ ವಸ್ತುವಿನ ವಿರೋಧಿ ದಿನಾಚರಣೆ ಪ್ರಯುಕ್ತ ಮಾದಕ ವಸ್ತುವಿನ ವ್ಯಸನವನ್ನು ತಡೆಗಟ್ಟುವ ಕುರಿತು ಕಾರ್ಯಾಗಾರವು ದೊಡ್ಡಬಾತಿಯ ತಪೋವನದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ.

ರಾಜ್ಯ ಮಟ್ಟದ ಸಮನ್ವಯ ಸಂಸ್ಥೆ ಕರ್ನಾಟಕ (ಪ್ರಾಯೋಜಿತ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಭಾರತ ಸರ್ಕಾರ-ನವದೆಹಲಿ), ವಿಶೇಷ ಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ತಪೋವನ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ತಪೋವನ ಆಯುರ್ವೇದ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ತಪೋವನ ಇನ್ಸಿಟ್ಯೂಟ್ ಆಫ್ ನರ್ಸಿಂಗ್ ಇವರ ಸಹಯೋಗದಲ್ಲಿ ಆಯೋಜಿಸಲಾದ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಉದ್ಘಾಟಿಸುವರು. ರಾಜ್ಯ ಮಟ್ಟದ ಸಮನ್ವಯ ಸಂಸ್ಥೆಯ ನಿರ್ದೇಶಕರು ಹಾಗೂ ತಪೋವನ ಸಮೂಹ ಸಂಸ್ಥೆಗಳ ಅಧ್ಯಕ್ಷ ವಿ. ಶಶಿಕುಮಾರ್ ಮೆಹರ್‌ವಾಡೆ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಜಿಲ್ಲಾ ವಿಶೇಷ ಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ಡಾ.ಕೆ.ಕೆ. ಪ್ರಕಾಶ್, ತಪೋವನ ಆಯುರ್ವೇದ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಪ್ರಾಂಶುಪಾಲ ಡಾ. ಕೆ.ಆರ್. ಅಶ್ವಿನಿ, ತಪೋವನ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಪ್ರಾಂಶುಪಾಲ ಡಾ.ಸುಮನಾ ಭಟ್, ತಪೋವನ ಇನ್ಸಿಟ್ಯೂಟ್ ಆಫ್ ನರ್ಸಿಂಗ್ ಪ್ರಾಂಶುಪಾಲ ಬಿ.ಆರ್. ಶೈಲಜಾ ಭಾಗವಹಿಸುವರು.

## ನಾಳೆ ನಗರದಲ್ಲಿ ಪ್ರೌಢಶಾಲಾ ಮಕ್ಕಳಿಗಾಗಿ ಚಿತ್ರ ಬಿಡಿಸುವ ಸ್ಪರ್ಧೆ

ದಾವಣಗೆರೆ, ಜೂ.25- ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಜಿಲ್ಲಾ ಮಟ್ಟದ ಪ್ರೌಢಶಾಲಾ ಮಕ್ಕಳಿಗಾಗಿ ಸ್ಥಳದಲ್ಲೇ ಚಿತ್ರ ಬಿಡಿಸುವ ಸ್ಪರ್ಧೆಯನ್ನು ನಾಡಿದ್ದು ದಿನಾಂಕ 28 ರಂದು ಬೆಳಿಗ್ಗೆ 9.30ಕ್ಕೆ ನಗರದ ಜೈನ್ ತಾಂತ್ರಿಕ ಮಹಾವಿದ್ಯಾಲದಲ್ಲಿ ಆಯೋಜಿಸಲಾಗಿದೆ. 8ನೇ ತರಗತಿ ಮಕ್ಕಳಿಗೆ-ಪರಿಸರ, 9ನೇ ತರಗತಿ ಮಕ್ಕಳಿಗೆ-ಪಟ್ಟಣ ಮತ್ತು ಪಾರ್ಕ್, 10ನೇ ತರಗತಿ ಮಕ್ಕಳಿಗೆ ನನ್ನ ಕನಸಿನ ಭೂಮಿ ಚಿತ್ರವನ್ನು ಬಿಡಿಸಬೇಕು. ವಿವರಕ್ಕೆ ಮೊಬೈಲ್ : 9164594508 ನ್ನು ಸಂಪರ್ಕಿಸಲು ಕರಾಮಾನಿಮಂಯ ಪರಿಸರ ಅಧಿಕಾರಿ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಕೆಂಪೇಗೌಡ ಜಯಂತಿ

ಜಿಲ್ಲಾಡಳಿತ ವತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ನಗರದ ಕುವೆಂಪು ಕನ್ನಡ ಭವನದಲ್ಲಿ ಶ್ರೀ ಕೆಂಪೇಗೌಡ ಜಯಂತಿ ಆಚರಿಸಲಾಗುತ್ತದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

## ರಾಣೇಬೆನ್ನೂರಿನಲ್ಲಿ ಇಂದು

ರಾಣೇಬೆನ್ನೂರು ತಾಲ್ಲೂಕು ಮಟ್ಟದ ಜನಸ್ಪಂದನ ಸಭೆಯು ತಾಲ್ಲೂಕು ಪಂಚಾಯ್ತಿ ಸಭಾ ಭವನದಲ್ಲಿ ಇಂದು ಬೆಳಿಗ್ಗೆ 10-30 ರಿಂದ 1-30ರ ವರೆಗೆ ನಡೆಯಲಿದೆ ಎಂದು ತಹಶೀಲ್ದಾರ್ ತಿಳಿಸಿದ್ದಾರೆ.

## ಜಲಸಿರಿ ವಿದ್ಯುತ್ ಬಿಲ್ ನೀಡುತ್ತಿಲ್ಲ

(3ನೇ ಪುಟದಿಂದ) ಅಧಿಕಾರಿಗಳಿಗೆ ಸೂಚನೆ ಕೂಡ ನೀಡಿದ್ದಾರೆಂದು ಹೇಳಿದರು.

ಎಲ್ಲಾ ವಾರ್ಡ್‌ಗಳಲ್ಲಿ ಕಾಮಗಾರಿ ಪೂರ್ಣಗೊಂಡ ನಂತರವೇ ವಿದ್ಯುತ್ ಬಿಲ್ ನೀಡಲು ತಿಳಿಸಲಾಗಿದೆ ಎಂದು ನಾಗರಾಜ್ ಸ್ಪಷ್ಟಪಡಿಸಿದರು.

ಈ ವಿಚಾರದ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಮಾರ್ಗದರ್ಶನದಂತೆ ಮುಂದಿನ ಕ್ರಮ ಜರುಗಿಸಲಾಗುವುದು. ಆದರೆ ಇಲ್ಲಿಯ ತನಕ ಪ್ರತಿ ತಿಂಗಳು ಈ ಹಿಂದೆ ಇದ್ದ ನೀರಿನ ಶುಲ್ಕವನ್ನು ಕಡ್ಡಾಯವಾಗಿ ಕಟ್ಟುವಂತೆ ತಿಳಿಸಲಾಗಿದೆ ಎಂದರು.

ಹಿಂದಿನ ಬಿಜೆಪಿ ಆಡಳಿತದ ಅವಧಿಯಲ್ಲಿನ ಸಾಮಾನ್ಯ ಸಭೆಯಲ್ಲಿ ಆಸ್ತಿ ತೆರಿಗೆ ಹೆಚ್ಚಳ ಕುರಿತು ವಿಷಯ ಮಂಡನೆ ಮಾಡಿ ತೀರ್ಮಾನ ಕೈಗೊಳ್ಳಲಾಗಿತ್ತು. ಈ ಆದೇಶ ಜಾರಿಗೆ ತರದಿದ್ದರೆ ಕೇಂದ್ರ ಸರ್ಕಾರದ 15 ನೇ ಹಣಕಾಸು ಅನುದಾನ ಹಾಗೂ ಇನ್ನಿತರೆ ಅನುದಾನಗಳನ್ನು ನೀಡುವುದಿಲ್ಲ ಎಂಬ ಕಾರಣ ನೀಡಿ, ಅಂದಿನ ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್ ಸದಸ್ಯರ ವಿರೋಧದ ನಡುವೆಯೂ ಆಸ್ತಿ ತೆರಿಗೆ ಹೆಚ್ಚಳದ ಹೊಸ ನಿಯಮವನ್ನು ಜಾರಿಗೆ ತಂದಿದ್ದಾರೆ. ಅಂದಿನ ಬಿಜೆಪಿ ಆಡಳಿತದ ಅವಧಿಯಲ್ಲಿ ಜಾರಿಗೆ ತಂದಿರುವ ಆದೇಶದಂತೆ ಈ ದುಪ್ಪಟ್ಟು ತೆರಿಗೆ ಜಾರಿಗೆ ಬಂದಿದೆ ಎಂದು ತಿಳಿಸಿದರು.

ಬಿಜೆಪಿ ಜಾರಿಗೆ ತಂದಿರುವ ಆದೇಶದಂತೆ ಜಾಲ್ತಿ ಸಾಲಿನ ಮಾರುಕಟ್ಟೆ ದರಗಳನ್ನು ಆಸ್ತಿ ತೆರಿಗೆ ಅಳವಡಿಸಿಕೊಳ್ಳಬೇಕಾಗಿರುವುದರಿಂದ ಕಳೆದ ಅಕ್ಟೋಬರ್ 2023 ರಲ್ಲಿ ಹೊಸ ಮಾರುಕಟ್ಟೆ ದರಗಳ ಪರಿಷ್ಕರಣೆ ಆಗಿದ್ದು, ಸದರಿ ದರಗಳಂತೆ ಲೆಕ್ಕಾಚಾರ ಮಾಡಿ ಆಸ್ತಿ ತೆರಿಗೆ ಪಾವತಿಸಿಕೊಳ್ಳಲಾಗುತ್ತಿದ್ದು, ಇದು ರಾಜ್ಯ ಸರ್ಕಾರದ ಎಲ್ಲಾ ಪಾಲಿಕೆಗಳಿಗೂ ಮತ್ತು ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲೂ ಅಳವಡಿಸಲಾಗಿದೆ.ಇದು ದಾವಣಗೆರೆ ಮಹಾನಗರ ಪಾಲಿಕೆಗೆ ಸೀಮಿತವಾಗಿಲ್ಲ ಎಂದು ಸ್ಪಷ್ಟಪಡಿಸಿದರು.

ಮಹಾನಗರ ಪಾಲಿಕೆ ಕಂದಾಯ ಶಾಖೆಗೆ ಸಂಬಂಧಿಸಿದ ಯಾವುದೇ ಸಾರ್ವಜನಿಕ ಕೆಲಸಗಳು ನಿಗದಿತ ಸಮಯದಲ್ಲಿ ಆಗದಿದ್ದರೆ 8277234444 ಈ ಹೊಸ ಸಹಾಯವಾಣಿ ಸಂಖ್ಯೆಗೆ ಸಂಪರ್ಕಿಸಲು ಕೋರಲಾಗಿದೆ.

ಸಚಿವ ಎಸ್ಸೆಸ್ಸೆಮ್ ಆದೇಶದಂತೆ ಪಾಲಿಕೆ ಆಡಳಿತ ಚುರುಕಾಗಿ ಕಾರ್ಯನಿರ್ವಹಿಸುತ್ತಿದ್ದು, ಈ ಹಿಂದೆ ಅಕ್ರಮವಾಗಿ ಪಾರ್ಕ್ ಜಾಗ ಮತ್ತು ಸಿಎ ನಿವೇಶನಗಳಿಗೆ ತೆರೆದಿದ್ದ ಖಾತೆಗಳನ್ನು ರದ್ದುಪಡಿಸಿ, ಪಾಲಿಕೆ ವಶಕ್ಕೆ ಪಡೆದು ಅಕ್ರಮದಲ್ಲಿ ಭಾಗಿಯಾಗಿರುವ 12 ಜನ ಅಧಿಕಾರಿಗಳನ್ನು ಅಮಾನತ್ತುಗೊಳಿಸಿ ಆದೇಶ ಮಾಡಲಾಗಿದೆ ಎಂದರು.

ಸಾರ್ವಜನಿಕರ ಅನುಕೂಲಕ್ಕಾಗಿ ಕಳೆದ 2023 ನೇ ಸಾಲಿನಲ್ಲಿ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಮತ್ತು ಶಾಸಕ ಡಾ. ಶಾಮನೂರು ಶಿವಶಂಕರಪ್ಪ ನೇತೃತ್ವದಲ್ಲಿ ಇ-ಆಸ್ತಿ ಆಂದೋಲನ ಮಾಡಿ ಸ್ಥಳದಲ್ಲಿಯೇ ನಮೂನೆ-2 ನ್ನು ವಿತರಿಸಲಾಗಿತ್ತು.ಮುಂದಿನ ದಿನಗಳಲ್ಲಿ ಪ್ರತಿ ವಾರ್ಡ್ ಮಟ್ಟದಲ್ಲಿ ಆಂದೋಲನವನ್ನು ನಡೆಸಲಾಗುವುದು. ಈಗಾಗಲೇ ಸಾರ್ವಜನಿಕರಿಗೆ ಆಸ್ತಿ ತೆರಿಗೆ ಪಾವತಿಸಲು ಆಯಾ ವಲಯ ಕಚೇರಿಗಳಲ್ಲಿ ಏಪ್ರಿಲ್, ಮೇ ತಿಂಗಳಲ್ಲಿ ಶೇ. 5 ರಷ್ಟು ರಿಯಾಯಿತಿ ನೀಡಿದ್ದು, ಸರ್ಕಾರ ಜುಲೈ 31 ರವರೆಗೆ ವಿಸ್ತರಿಸಿದೆ ಎಂದು ಹೇಳಿದರು.

ಲೋಕಸಭಾ ಚುನಾವಣೆ ನೀತಿ ಸಂಹಿತೆ ಜಾರಿ ಹಿನ್ನೆಲೆಯಲ್ಲಿ ಕಳೆದ ಮೂರು ತಿಂಗಳಿನಿಂದ ಸಾಮಾನ್ಯ ಸಭೆ ಕರೆಯಲು ಸಾಧ್ಯವಾಗಿಲ್ಲ. ಈಗಾಗಲೇ ಸ್ಥಾಯಿ ಸಮಿತಿ ಸಭೆ ಕರೆಯಲು ಆದೇಶ ನೀಡಿದ್ದು, ನಂತರ ಸಾಮಾನ್ಯ ಸಭೆ ಕರೆಯಲು ಮೇಯರ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆಂದರು.

ಪತ್ರಿಕಾಗೋಷ್ಠಿಯಲ್ಲಿ ಮೇಯರ್ ವಿನಾಯಕ ಪೈಲ್ವಾನ್, ಪಾಲಿಕೆ ಸದಸ್ಯರಾದ ಗಡಿಗುಡಾಳ್ ಮಂಜುನಾಥ್, ಅಬ್ದುಲ್ ಲತೀಫ್, ಕೆ. ಚಮನ್ ಸಾಬ್, ಸತೀಶ್, ಲೋಕೇಶ್, ದಾದಾಪೀರ್ ಮತ್ತಿತರರು ಉಪಸ್ಥಿತರಿದ್ದರು.

## ಆಂಗ್ಲ ಮಾಧ್ಯಮ ಹೆಚ್ಚುವರಿ ವಿಭಾಗಕ್ಕೆ ಸಮ್ಮತಿ

(3ನೇ ಪುಟದಿಂದ) 2024–25ನೇ ಸಾಲಿನಲ್ಲಿ 1,419 ಶಾಲೆಗಳನ್ನು ಆರಂಭಿಸಲು ಅನುಮತಿ ನೀಡಲಾಗಿತ್ತು. ಈಗ ಹೆಚ್ಚುವರಿ ವಿಭಾಗ ತೆರೆಯಲು ಸಮ್ಮತಿ ನೀಡಲಾಗಿದ್ದು, ಆರ್ಥಿಕ ಹೊರೆಯಾಗದಂತೆ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಸೂಚಿಸಲಾಗಿದೆ.

## ರೇಣುಕಾಸ್ವಾಮಿ ಕೊಲೆ ಪ್ರಕರಣ :ನ್ಯಾಯ ದೊರಕುವ ವಿಶ್ವಾಸದಲ್ಲಿ ಪೋಷಕರು

ಬೆಂಗಳೂರು, ಜೂ. 25- ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಪೊಲೀಸರ ತನಿಖೆ ಬಗ್ಗೆ ಪೋಷಕರು ಸಮಾಧಾನ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಾವೇರಿ ನಿವಾಸದಲ್ಲಿ ಭೇಟಿ ಮಾಡಿದ ರೇಣುಕಾ ಸ್ವಾಮಿ ತಂದೆ-ತಾಯಿ, ಇದುವರೆಗೂ ನಟ ದರ್ಶನ್ ಮತ್ತು ಇತರರ ವಿರುದ್ಧ ತನಿಖಾಧಿಕಾರಿಗಳು ಒಳ್ಳೆಯ ಕೆಲಸ ಮಾಡುತ್ತಿದ್ದು, ನಮಗೆ ನ್ಯಾಯ ದೊರಕುವ ವಿಶ್ವಾಸವಿದೆ ಎಂದಿದ್ದಾರೆ.

ಮಗನ ಹತ್ಯೆ ನಂತರ ಕುಟುಂಬ ನಿರ್ವಹಣೆ ಕಷ್ಟಕರವಾಗಿದ್ದು ಮಗಳಿಗೆ ಸರ್ಕಾರಿ ಉದ್ಯೋಗ ಕೊಡಿಸುವಂತೆ ಮಾಡಿದ ಮನವಿಗೆ ಮುಖ್ಯಮಂತ್ರಿ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಎರಡನೇ ಆರೋಪಿಯಾಗಿರುವ ಚಿತ್ರ ನಟ ದರ್ಶನ್ ಅವರನ್ನು ರಕ್ಷಿಸಲು ಸಂಪುಟದ ಹಿರಿಯ ಸಹೋದ್ಯೋಗಿ ಸೇರಿದಂತೆ ಕಾಂಗ್ರೆಸ್ ಮತ್ತು ಬಿಜೆಪಿಯ ಐವರು ಶಾಸಕರು ಪ್ರಯತ್ನ ಮಾಡಿದರೂ ಅದಕ್ಕೆ ಸರ್ಕಾರ ತಲೆಬಾಗಲಿಲ್ಲ.

ದರ್ಶನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಒತ್ತಡ ತೀವ್ರವಾಗುತ್ತಿರುವುದನ್ನು ಗಮನಿಸಿದ ಮುಖ್ಯಮಂತ್ರಿ ಅವರು, ಸಚಿವ ಸಂಪುಟ ಸಭೆಯಲ್ಲೇ, ಈ ವಿಚಾರದ ಬಗ್ಗೆ ಯಾರೂ ಬಹಿರಂಗ ಹೇಳಿಕೆ ನೀಡಬೇಡಿ ಮತ್ತು ಆತನ ಪರ ವಕಾಲತ್ತು ವಹಿಸಿ ಮಾತನಾಡಬೇಡಿ ಎಂದು ಕಿವಿಮಾತು ಹೇಳಿದ್ದರು.

ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ದರ್ಶನ್, ಆತನ ಗೆಳತಿ ಪವಿತ್ರಾ ಗೌಡ ಸೇರಿದಂತೆ 17 ಆರೋಪಿಗಳು ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾರೆ.

ಇದೆಲ್ಲವನ್ನು ಗಮನಿಸಿ ರೇಣುಕಾಸ್ವಾಮಿ ಕುಟುಂಬದವರು ಕೃತಜ್ಞತೆ ಸಲ್ಲಿಸಿ, ಮಗಳಿಗೆ ಸರ್ಕಾರಿ ಕೆಲಸ ನೀಡುವಂತೆ ಮನವಿ ಮಾಡಿದ್ದಾರೆ.

## ಸ್ಪೀಕರ್ ಚುನಾವಣೆ ಕಾಂಗ್ರೆಸ್‌ನಿಂದ ವಿಪ್

(3ನೇ ಪುಟದಿಂದ) ಸುರೇಶ್ ಅವರು ಸಂಸದರಿಗೆ ವಿಪ್ ಜಾರಿ ಮಾಡಿದ್ದಾರೆ.

ಲೋಕಸಭೆಯ ಸ್ಪೀಕರ್ ಸ್ಥಾನಕ್ಕೆ ಎನ್‌ಡಿಎ ತನ್ನ ಅಭ್ಯರ್ಥಿಯಾಗಿ ಬಿಜೆಪಿಯ ಓಂ ಬಿರ್ಲಾ ಅವರನ್ನು ಕಣಕ್ಕಿಳಿಸಿದೆ.

ಅವರ ವಿರುದ್ಧ ಪ್ರತಿಪಕ್ಷಗಳ ಮೈತ್ರಿಕೂಟ ಇಂಡಿಯಾ ತನ್ನ ಅಭ್ಯರ್ಥಿಯಾಗಿ ಕೇರಳದ ಕಾಂಗ್ರೆಸ್ ಸಂಸದ ಕೋಡಿಕುನ್ನಿಲ್ ಸುರೇಶ್ ಅವರನ್ನು ಕಣಕ್ಕಿಳಿಸಿದೆ.

## ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

(3ನೇ ಪುಟದಿಂದ) ಮಂಡ್ಯದಲ್ಲಿ 48 ನೇ ಸಾಹಿತ್ಯ ಸಮ್ಮೇಳನ 1974 ರಲ್ಲಿ ಜಯದೇವಿ ತಾಯಿ ಲಿಗಾಡೆ ಅವರ ಅಧ್ಯಕ್ಷತೆಯಲ್ಲಿ, 63ನೇ ಸಾಹಿತ್ಯ ಸಮ್ಮೇಳನ 1994 ರಲ್ಲಿ ಡಾ.ಚದುರಂಗ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಇದೀಗ ಮೂರನೇ ಬಾರಿ ಸಮ್ಮೇಳನ ಆಯೋಜಿಸಲಾಗುತ್ತಿದೆ, ಎಲ್ಲರೂ ಸೇರಿ ಸಮ್ಮೇಳನವನ್ನು ಯಶಸ್ವಿಯಾಗಿ ಆಯೋಜಿಸುವ ವಿಶ್ವಾಸವಿದೆ ಎಂದರು.

## ಎಫ್‌ಐಆರ್ ದಾಖಲಿಸಿದ ಎಸ್‌ಐಟಿ

(3ನೇ ಪುಟದಿಂದ) ಪ್ರಜ್ವಲ್ ಅವರನ್ನು ಎಸ್‌ಐಟಿ ಕಸ್ಟಡಿಗೆ ತೆಗೆದುಕೊಂಡಿದೆ.

ಇದರ ಮಧ್ಯೆ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಜೂನ್ 29ರವರೆಗೂ ಪ್ರಜ್ವಲ್ ಅವರನ್ನು ಎಸ್‌ಐಟಿ ಕಸ್ಟಡಿಗೆ ನ್ಯಾಯಾಲಯ ನೀಡಿದೆ.

## ನಂದಿನಿ ಹಾಲಿನ ದರ ಹೆಚ್ಚಳ

(3ನೇ ಪುಟದಿಂದ) 99 ಲಕ್ಷ ಲೀಟರ್‌ಗೆ ಏರಿಕೆಯಾಗಿದೆ. ಹೆಚ್ಚುವರಿ ಉತ್ಪಾದಿತ ಹಾಲನ್ನು ರೈತರಿಂದ ಖರೀದಿ ಮಾಡಬೇಕಿದೆ.

ನಾಡಿನ ಲಕ್ಷಾಂತರ ಹೈನುಗಾರರ ಹಿತದೃಷ್ಟಿಯಿಂದ ಕೆ.ಎಂ.ಎಫ್ ಸಂಸ್ಥೆ ತೆಗೆದುಕೊಂಡ ನಿರ್ಣಯವಾಗಿದ್ದು, ಹೆಚ್ಚುವರಿ ಉತ್ಪಾದಿತ ಹಾಲನ್ನು ಗ್ರಾಹಕರಿಗೆ ನೇರವಾಗಿ ತಲುಪಿಸುವ ಸದುದ್ದೇಶ ಹೊಂದಿದೆ.

ಈಗಾಗಲೇ ಗರಿಷ್ಟ ಪ್ರಮಾಣದ ಹಾಲನ್ನು ಹಾಲಿನ ಪೌಡರ್ ತಯಾರಿಕೆ ಉದ್ದೇಶಕ್ಕೆ ಬಳಕೆ ಮಾಡಲಾಗುತ್ತಿದೆ, ನಿತ್ಯ ಸುಮಾರು 30 ಲಕ್ಷ ಲೀಟರ್ ಹಾಲಿನ ಪೌಡರ್ ತಯಾರಿಕೆಗೆ ಬಳಸಲ್ಪಡುತ್ತಿದ್ದು, 250 ಮೆಟ್ರಿಕ್ ಟನ್ ಹಾಲಿನ ಪೌಡರ್ ತಯಾರಿಸಲಾಗುತ್ತಿದೆ, ಇದು ಹಾಲಿನ ಪೌಡರ್‌ಗೆ ಇರುವ ಬೇಡಿಕೆಗೆ ಅನುಗುಣವಾಗಿದೆ.

ಈ ಹಿಂದೆ ಹಾಲಿನ ಬೆಲೆಯಲ್ಲಿ 3 ರೂ. ಹೆಚ್ಚಳ ಮಾಡಿ ಆ ಹಣವನ್ನು ರೈತರಿಗೆ ನೇರವಾಗಿ ವರ್ಗಾಯಿಸುವ ಪ್ರೋತ್ಸಾಹದಾಯಕ ಕ್ರಮ ಕೈಗೊಂಡಿದ್ದರಿಂದ ಹೈನೋದ್ಯಮ ಹಿಂದಿಗಿಂತ ಲಾಭ ತಂದುಕೊಡುವ ಉದ್ಯೋಗವಾಗಿದೆ, ಈ ಬಾರಿ ಉತ್ತಮ ಮಳೆಯಾಗಿ ಜಾನುವಾರುಗಳಿಗೆ ಹಸಿರು ಮೇವು ಲಭ್ಯವಾಗುತ್ತಿದೆ, ಈ ಕಾರಣಗಳಿಂದ ಹಾಲಿನ ಉತ್ಪಾದನೆ ನಿತ್ಯ ಸರಿ ಸುಮಾರು ಒಂದು ಕೋಟಿ ಲೀಟರ್ ತಲುಪುವ ಹಂತಕ್ಕೆ ಬಂದಿದೆ.

ಹೆಚ್ಚುವರಿ ಉತ್ಪಾದಿತ ಹಾಲನ್ನು ರೈತರಿಂದ ಖರೀದಿಸಿ, ಗ್ರಾಹಕರಿಗೂ ಹೊರೆಯಾಗದಂತೆ ಮಾರಾಟ ಮಾಡಲು ಕೆ.ಎಂ.ಎಫ್ ಸಂಸ್ಥೆ ಹಾಲಿನ ದರ ಹೆಚ್ಚಳ ನಿರ್ಧಾರ ಕೈಗೊಂಡಿದೆ ಎಂದು ಸಮರ್ಥಿಸಿಕೊಂಡಿದ್ದಾರೆ.

## ಜಲ, ವಾಯು, ಅರಣ್ಯ ರಕ್ಷಣೆಗೆ ಕಟಿಬದ್ಧರಾಗಬೇಕು

(3ನೇ ಪುಟದಿಂದ) ಕಾರ್ಮಿಕರಾಗಿ ಕೆಲಸ ಮಾಡಿದವರು, ಆ ಹಳೆಯ ನೆನಪುಗಳ ಜೊತೆಗೆ ಅವರು ಹರಿಹರಕ್ಕೆ ಬಂದಿದ್ದಾರೆ, ಆ ಕಾರ್ಖಾನೆಯ ಅಧಿಕಾರಿಗಳನ್ನು ಭೇಟಿ ಮಾಡುವ ಹಂಬಲ ವ್ಯಕ್ತಪಡಿಸಿದ್ದಾರೆ ಎಂದರು.

ಈಗ ಶಿಕ್ಷಣವೆಂಬುದು ವ್ಯಾಪಾರೀಕರಣ ವಾಗಿದೆ. ಶ್ರೀಮಂತರಿಗಷ್ಟೇ ಶಿಕ್ಷಣ ಪಡೆಯಲು ಸಾಧ್ಯ ಎಂಬ ವಾತಾವರಣ ಸೃಷ್ಟಿಯಾಗಿದೆ. ಬಡವರ ಶಿಕ್ಷಣಕ್ಕೆ ಮಹತ್ವ ನೀಡುವ ಈ ವಿದ್ಯಾಸಂಸ್ಥೆಯು ಈ ಭಾಗದಲ್ಲಿ ಶಾಲೆ ಆರಂಭಿಸಿರುವುದು ಸೂಕ್ತವಾಗಿದೆ, ತಾಂತ್ರಿಕ ಶಿಕ್ಷಣದ ಕೋರ್ಸ್‌ಗಳನ್ನು ಆರಂಭಿಸುವತ್ತ ಈ ಸಂಸ್ಥೆಯ ಮುಖ್ಯಸ್ಥರು ಆದ್ಯತೆ ನೀಡಬೇಕೆಂದು ಸಲಹೆ ನೀಡಿದರು.

ರೆವೆರೆಂಡ್ ಫಾ. ಡಯಾನೀಶಿಯಸ್ ವಜ್ ಎಸ್.ಜೆ. ರವರು ಮಾತನಾಡಿ, ನಮ್ಮದು ಮೂಲ ವಾಗಿ ಧಾರ್ಮಿಕ ಸಂಸ್ಥೆಯಾದರೂ ಶಿಕ್ಷಣ ಪ್ರಸಾರ ಕಾರ್ಯದಲ್ಲಿ ಸಾಕಷ್ಟು ಸಾಧನೆಯನ್ನು ಮಾಡಿದ್ದೇವೆ.

ಅಂತರಾಷ್ಟ್ರೀಯ ಗುಣಮಟ್ಟದ ಶಿಕ್ಷಣ ನೀಡುವ ಹಂಬಲದೊಂದಿಗೆ ಈ ಶಾಲೆಯನ್ನು ಆರಂಭಿಸಿದ್ದೇವೆ ಎಂದರು.

ರಾಯಚೂರು- ಮಾನ್ವಿ ಭಾಗದಲ್ಲಿ ದಲಿತರು, ದೇವದಾಸಿಯರು, ಹಿಂದುಳಿದ ವರ್ಗದ ವಿದ್ಯಾರ್ಥಿ ಗಳ ಶಿಕ್ಷಣಕ್ಕಾಗಿ ಸೇವೆಗೈದ ಹಿರಿಯರಾದ ಫಾ.ಮ್ಯಾಕ್ಸಿಮ್ ರಸ್ಕೀನ ಎಸ್.ಜೆ ಹಾಗೂ 12 ಜನ ವಿದ್ಯಾಭಿಮಾನಿಗಳು, ಪೋಷಕರನ್ನೂ ಗೌರವಿಸಲಾಯಿತು.

ಸಂತ ಅಲೋಶಿಯಸ್ ಮಾತೃ ಸಂಸ್ಥೆ ಮಂಗಳೂರು ಇದರ ರೆಕ್ಟರ್ ಆಗಿರುವ ಫಾದರ್ ಮೆಲ್ವಿನ್ ಪಿಂಟೋ ಎಸ್.ಜೆ., ಕಾಲೇಜು ವಿಭಾಗದ ನಿರ್ದೇಶಕ ಫಾ.ಎರಿಕ್ ಮಥಾಯಸ್, ಫಾ.ಮೆಲ್ವಿನ್ ಪಿಂಟೊ, ಬೆಂಗಳೂರಿನ ಸಂತ ಜೋಸೆಫ್ ವಿಶ್ವವಿದ್ಯಾಲಯದ ಸಾರ್ವಜನಿಕ ಸಂಪರ್ಕಾಧಿಕಾರಿ ಚಂದ್ರಕಾಂತ್, ಶಾಲೆಯ ಪ್ರಾಂಶುಪಾಲೆ ರೀನಾ ಪಿಂಟೋ, ಬ್ಯಾಪ್ಟಿಸ್ಟ್ ಸನ್ನಿ ಗುಡಿನೋ, ಉಪನ್ಯಾಸಕರಾದ ಅಬ್ದುಲ್ ರಹಮಾನ್ ಶಮೀಮ್ ಬಾನು, ಹಣಕಾಸು ಅಧಿಕಾರಿ ಫಾ.ವಿನೋದ್, ಎ.ಜೆ. ವಸತಿ ನಿಲಯದ ನಿರ್ದೇಶಕ ಫಾ.ಜೋನ್ ಬ್ಯಾಪ್ಟಿಸ್ಟ್, ಕಾಲೇಜು ಪ್ರಾಂಶುಪಾಲೆ ಪುಷ್ಪಲತಾ ಅರಸ್, ಉಪ ಪ್ರಾಂಶುಪಾಲೆ ಮೌಸಿನ್ ಉಲ್ಲಾ, ಪಾಸ್ಕಲ್ ಫೆರ್ನಾಂಡಿಸ್, ಮಂಜುನಾಥ್ ಟಿ.ಎಸ್ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮ ಆರಂಭವಾಗಿ ಇನ್ನೇನು ರಾಜ್ಯಪಾಲರು ಮಾತನಾಡಲು ಆರಂಭಿಸುತ್ತಿದ್ದಂತೆ ಜೋರಾಗಿ ಮಳೆ ಸುರಿದು, ಸಮಾರಂಭಕ್ಕೆ ತುಸು ಅಡಚಣೆಯನ್ನುಂಟು ಮಾಡಿತು.

## ಕೇಜ್ರಿವಾಲ್‌ಗೆ ಜಾಮೀನು ನಿರಾಕರಿಸಿದ ಹೈಕೋರ್ಟ್

(3ನೇ ಪುಟದಿಂದ) ತೀರ್ಪನ್ನು ಪ್ರಶ್ನಿಸಿ ಇಡಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್ ಪೀಠವು ಜೂನ್ 21 ರಂದು ಆದೇಶ ಕಾಯ್ದಿರಿಸಿತ್ತು. ಇಂದು ತನ್ನ ತೀರ್ಪು ನೀಡಿದೆ.

ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್ ಅವರನ್ನು ಕಳೆದ ಮಾರ್ಚ್ 21ರಂದು ಇಡಿ ಬಂಧಿಸಿತ್ತು. ಚುನಾವಣಾ ಪ್ರಚಾರಕ್ಕಾಗಿ ಸುಪ್ರೀಂ ಕೋರ್ಟ್ ಜೂನ್ 1ರವರೆಗೆ ಮಧ್ಯಂತರ ಜಾಮೀನು ನೀಡಿತ್ತು. ಜೂನ್ 2 ರಂದು ಅವರು ಮತ್ತೆ ಶರಣಾಗಿದ್ದರು.

## ಡೆಂಘಿ ಪ್ರಕರಣ: ಗಂಭೀರವಾಗಿ ಪರಿಗಣಿಸುವಂತೆ ಸಿಎಂ ಸೂಚನೆ

(3ನೇ ಪುಟದಿಂದ) ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿದ್ದು, ನಿಯಂತ್ರಣಕ್ಕೆ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ.

ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಚಿಕಿತ್ಸಾ ಸೌಲಭ್ಯಗಳು, ಔಷಧಿಗಳು ಲಭ್ಯವಿರುವುದನ್ನು ಖಾತರಿಪಡಿಸಲು ಸೂಚಿಸಲಾಗಿದೆ

ಆಶಾ ಕಾರ್ಯಕರ್ತೆಯರು, ನರ್ಸಿಂಗ್ ವಿದ್ಯಾರ್ಥಿಗಳು, ಎನ್.ಎಸ್.ಎಸ್. ವಿದ್ಯಾರ್ಥಿಗಳು ಮತ್ತಿತರ ಸ್ವಯಂ ಸೇವಕರ ನೆರವಿನೊಂದಿಗೆ ಮನೆ ಮನೆ ಸಮೀಕ್ಷೆ ನಡೆಸಿ ಅರಿವು ಮೂಡಿಸಲು ಸೂಚಿಸಲಾಗಿದೆ.

## ಸ್ವಾರ್ಥಕ್ಕಾಗಿ ಸಂವಿಧಾನ ಬದಲಿಸಿದ ಇಂದಿರಾ ಗಾಂಧಿ

(3ನೇ ಪುಟದಿಂದ) ನಂತರ ಸುಪ್ರೀಂ ಮೊರೆ ಹೋದ ಇಂದಿರಾಗೆ ನ್ಯಾಯಾಲಯವು ಷರತ್ತುಗಳನ್ನು ವಿಧಿಸಿ ತಾತ್ಕಾಲಿಕ ತಡೆ ನೀಡಿತ್ತು. ಅಲಹಾಬಾದ್ ಹಾಗೂ ಸುಪ್ರೀಂ ಕೋರ್ಟ್ ತೀರ್ಪಿನ ವಿರುದ್ಧ ಕಾಂಗ್ರೆಸ್ ದೆಹಲಿಯಲ್ಲಿ ದೊಡ್ಡ ಮಟ್ಟದ ಪ್ರತಿಭಟನೆ ನಡೆಸಿತ್ತು.

ಕಾಂಗ್ರೆಸ್ ನಿಲುವಿನ ವಿರುದ್ಧ ಜಯಪ್ರಕಾಶ್ ನಾರಾಯಣ ನೇತೃತ್ವದಲ್ಲಿ ಜೂ.25ರಂದು ದೆಹಲಿಯಲ್ಲಿ ವಿಪಕ್ಷಗಳ ಮುಖಂಡರು ಪ್ರತಿಭಟನೆ ನಡೆಸಿದರು. ಅದೇ ದಿನ ರಾತ್ರಿ ಇಂದಿರಾ ಗಾಂಧಿ ತುರ್ತು ಪರಿಸ್ಥಿತಿ ಘೋಷಣೆ ಮಾಡಿದರು. ದೇಶಾ ದ್ಯಂತ ಪ್ರತಿಭಟನಾಕಾರರನ್ನು ಬಂಧಿಸಲಾಯಿತು. ಪತ್ರಿಕಾ ಸ್ವಾತಂತ್ರ್ಯ ಕಸಿದುಕೊಳ್ಳಲಾಯಿತು ಎಂದರು.

ಇಷ್ಟೆಲ್ಲಾ ಮಾಡಿಯೂ ಆತಂಕದಲ್ಲಿದ್ದ ಇಂದಿರಾ, ಸಂವಿಧಾನದ 38, 39, 40, 41 ಹಾಗೂ 42ನೇ ವಿಧಿಗಳನ್ನು ತಿದ್ದುಪಡಿ ಮಾಡಿದರು. ಸಂವಿಧಾನದಲ್ಲಿ ಎಲ್ಲರೂ ಸಮಾನರು ಎಂಬ ಆಶಯವನ್ನೇ ಬುಡ ಮೇಲು ಮಾಡಿದರು. ಸಂವಿಧಾನ ತಿದ್ದುಪಡಿಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ ಎಂದು 42ನೇ ವಿಧಿಯಲ್ಲಿ ತಿದ್ದುಪಡಿ ಮಾಡಿ, ನ್ಯಾಯಾಂಗದ ಮೇಲೆ ಸಂಪೂರ್ಣ ಹಿಡಿತ ಸಾಧಿಸಿದ್ದು ದೇಶದ ದೊಡ್ಡ ದುರಂತ ಎಂದರು.

ಮಾತು ಮಾತಿಗೆ ಅಂಬೇಡ್ಕರ್ ಅವರನ್ನು ಉಲ್ಲೇಖಿಸುವ ಕಾಂಗ್ರೆಸ್, ಅಂಬೇಡ್ಕರ್ ವಿರುದ್ಧದ ನಡೆ ಅನುಸರಿಸಿತು. ಮೀಸಾ ಕಾನೂನು ಜಾರಿ ಮಾಡಿ ದೇಶಾದ್ಯಂತ 1.10 ಲಕ್ಷಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿತ್ತು ಎಂದರು.

ಅತಿಥಿಗಳಾಗಿ ಆಗಮಿಸಿದ್ದ ಕೋಲಾರದ ಮಾಜಿ ಸಂಸದ ಎಸ್.ಮುನಿಸ್ವಾಮಿ ಮಾತನಾಡಿ, ಚುನಾವಣೆ ಹತ್ತಿರ ಬಂದಾಗ ಮಾತ್ರ ಕಾಂಗ್ರೆಸ್‌ಗೆ ಸಂವಿಧಾನ ನೆನಪಾಗುತ್ತದೆ ಎಂದರು.


ಡಾ.ಅಂಬೇಡ್ಕರ್ ಅವರಿಗೆ ಅತಿ ಹೆಚ್ಚು ಅಪಮಾನ ಮಾಡಿದ್ದೇ ಕಾಂಗ್ರೆಸ್ ಸರ್ಕಾರ. ಅವರು ಚುನಾವಣೆಗೆ ಸ್ಪರ್ಧಿಸಿದ್ದಾಗ ಅವರ ವಿರುದ್ಧ ಎರಡು ಬಾರಿ ಪ್ರಚಾರ ನಡೆಸದೆ ಸೋಲಿಸಿದ ಖಳನಾಯಕ ನೆಹರು ಎಂದರು.

ಪರಿಶಿಷ್ಟ ಜಾತಿ ಹಾಗೂ ಪಂಗಡಕ್ಕೆ ಮೀಸಲಾಗಿದ್ದ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳುವ ಕಾಂಗ್ರೆಸ್ ಪಕ್ಷಕ್ಕೆ ದಲಿತರ ಪರ ಮಾತನಾಡಲು ಅರ್ಹತೆ ಇಲ್ಲ ಎಂದರು.

ನಿವೃತ್ತ ಎಸ್ಪಿ ರವಿ ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಹೈಕೋರ್ಟ್ ವಕೀಲ ವಿವೇಕ್ ರೆಡ್ಡಿ, ಮುರುಗೇಶ್ ಆರಾಧ್ಯ ಉಪಸ್ಥಿತರಿದ್ದರು. ಕೆ.ಶಿವಶಂಕರ್ ಪ್ರಾರ್ಥಿಸಿದರು. ಕೃಷ್ಣ ಕುಮಾರ್ ಸ್ವಾಗತಿಸಿದರು.

### ರಾಹುಲ್‌ಗೆ ಬೈಬಲ್ ಪುಸ್ತಕವೇ ಸಂವಿಧಾನವಾಗಿರಬಹುದು: ಬೆಲ್ಲದ್

ರಾಹುಲ್ ಗಾಂಧಿ ಕೈಯಲ್ಲಿ ಸಂವಿಧಾನವೆಂಬ ಹೆಸರಿನ ಪುಸ್ತಕ ಹಿಡಿದುಕೊಂಡಿ ರುತ್ತಾರೆ. ಆದರೆ ನಮ್ಮ ಸಂವಿಧಾನದದ ಪುಸ್ತಕ ದೊಡ್ಡದಿದೆ. ರಾಹುಲ್ ಗಾಂಧಿ ಬೈಬಲ್ ಸೈಜ್ ಬುಕ್ ಹಿಡಿದುಕೊಂಡು ಓಡಾಡುತ್ತಾರೆ. ಅದು ಸಂವಿಧಾನ ಪುಸ್ತಕವೋ? ಅಥವಾ ಬೈಬಲ್ ಪುಸ್ತಕವೋ ಎಂಬುದು ನನಗೆ ತಿಳಿದಿಲ್ಲ. ಯಾಕೆಂದರೆ ಅದು ನೋಡಿದರೆ ಬೈಬಲ್ ಹಿಡಿದುಕೊಂಡು ಓಡಾಡುತ್ತಾರೆಂಬಂತೆ ಅನಿಸುತ್ತದೆ. ಯಾಕೆಂದರೆ ಅವರಿಗೆ ಅದೇ ಸಂವಿಧಾನ ಎಂದು ಶಾಸಕ ಅರವಿಂದ್ ಬೆಲ್ಲದ್ ಹೇಳಿದರು.



## ಆರೋಗ್ಯಮಾತೆ ದರ್ಶನ ಪಡೆದ ರಾಜ್ಯಪಾಲರು



ಹರಿಹರ, ಜೂ. 25- ಇಲ್ಲಿನ ಇತಿಹಾಸ ಪ್ರಸಿದ್ದ ಆರೋಗ್ಯಮಾತೆ ಬಸಿಲಿಕ ಪುಣ್ಯಕ್ಷೇತ್ರಕ್ಕೆ ಕರ್ನಾಟಕ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಇಂದು ಭೇಟಿ ನೀಡಿ, ಹರಿಹರದ ಆರೋಗ್ಯಮಾತೆಯ ದರ್ಶನ ಪಡೆದರು.

ದೇವಾಲಯದ ಪ್ರಧಾನ ಗುರುಗಳಾದ ಫಾದರ್ ಜಾರ್ಜ್ ಕೆ.ಎ. ಇವರು ಈ ಬಸಿಲಿಕ ಪುಣ್ಯಕ್ಷೇತ್ರದ ಇತಿಹಾಸದ ಮಾಹಿತಿಯನ್ನು ರಾಜ್ಯಪಾಲರಿಗೆ ನೀಡಿದರು.

ಈ ವೇಳೆ ದೇವಾಲಯದ ವಾಸ್ತುಶಿಲ್ಪ ಹಾಗೂ ಸುಂದರ ನೋಟಕ್ಕೆ ಪ್ರಶಂಸೆ ವ್ಯಕ್ತಪಡಿಸಿದ, ರಾಜ್ಯಪಾಲರನ್ನ ಶಿವಮೊಗ್ಗ ಧರ್ಮಾಧ್ಯಕ್ಷರಾದ ಡಾ. ಫ್ರಾನ್ಸಿಸ್ ಸೆರಾವೋ ಸನ್ಮಾನಿಸಿದರು.

ಶಾಸಕ ಬಿ.ಪಿ ಹರೀಶ್, ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ. ಜಿಲ್ಲಾ ರಕ್ಷಣಾಧಿಕಾರಿ ಉಮಾ ಪ್ರಶಾಂತ್, ಅಪರ ಎಸ್.ಪಿ. ಸಂತೋಷ್ ವಿಜಯಕುಮಾರ ಸೇರಿದಂತೆ ಜಿಲ್ಲಾಡಳಿತ ಹಾಗೂ ತಾಲ್ಲೂಕು ಆಡಳಿತ ಉನ್ನತ ಅಧಿಕಾರಿಗಳು ಉಪಸ್ಥಿತರಿದ್ದರು.

# ಗುಣಮಟ್ಟದ ಕಾಮಗಾರಿಗೆ ಶಾಸಕರ ಸೂಚನೆ

## ಹರಲೀಪುರ ಆರೋಗ್ಯ ಕೇಂದ್ರದ ಕಟ್ಟಡ ಕಾಮಗಾರಿ ಪರಿಶೀಲಿಸಿದ ಶಾಸಕ ಬಸವಂತಪ್ಪ

ಚನ್ನಗಿರಿ, ಜೂ.25- ತಾಲ್ಲೂಕಿನ ಹರಲೀಪುರ ಗ್ರಾಮಕ್ಕೆ ಶಾಸಕ ಕೆ.ಎಸ್. ಬಸವಂತಪ್ಪ ಭೇಟಿ ನೀಡಿ ನಿರ್ಮಾಣ ಹಂತದಲ್ಲಿರುವ ಪ್ರಾಥಮಿಕ ಆರೋಗ್ಯ ಉಪಕೇಂದ್ರದ ಕಟ್ಟಡ ಕಾಮಗಾರಿ ಪರಿಶೀಲಿಸಿ, ಶೀಘ್ರದಲ್ಲೇ ಕಾಮಗಾರಿ ಪೂರ್ಣಗೊಳಿಸಿ ಈ ಭಾಗದ ಜನರಿಗೆ ಆರೋಗ್ಯ ಸೇವೆ ಒದಗಿಸ ಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಾಯಕೊಂಡ ಕ್ಷೇತ್ರ ವ್ಯಾಪ್ತಿಯ ಚನ್ನಗಿರಿ ತಾಲ್ಲೂಕಿನ ಹರಲೀಪುರ ಗ್ರಾಮದಲ್ಲಿ 18.50 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಪ್ರಾಥಮಿಕ ಆರೋಗ್ಯ ಉಪಕೇಂದ್ರ ಕಟ್ಟಡದ ಕಾಮಗಾರಿ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ನಿರ್ಮಿತಿ ಕೇಂದ್ರದಿಂದ ಕಳೆದ 3 ವರ್ಷ ಗಳಿಂದ ಪ್ರಾಥಮಿಕ ಆರೋಗ್ಯ ಉಪಕೇಂದ್ರದ ಕಟ್ಟಡದ ನಿರ್ಮಾಣ ಕಾಮಗಾರಿ ನಡೆದಿದ್ದು, ಕಟ್ಟಡ ಬಹುತೇಕ ಪೂರ್ಣಗೊಂಡಿದೆ. ಆದರೆ ಅಲ್ಲಲ್ಲಿ ಕಳಪೆ ಕಾಮಗಾರಿ ಕಂಡು ಬಂದ ಕಾರಣ ಗುಣಮಟ್ಟದ ಕಾಮಗಾರಿಯೊಂದಿಗೆ ಕಟ್ಟಡ ಪೂರ್ಣಗೊಳಿಸ ಬೇಕೆಂದು ನಿರ್ಮಿತಿ ಕೇಂದ್ರದ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಕಳೆದ 3 ವರ್ಷಗಳಿಂದ ನೆನಗುದಿಗೆ ಬಿದ್ದ ಪ್ರಾಥಮಿಕ ಆರೋಗ್ಯ ಉಪಕೇಂದ್ರ ಕಟ್ಟಡದಿಂದ ಈ ಭಾಗದ ಜನರಿಗೆ ಸಾಕಷ್ಟು ತೊಂದರೆ ಆಗುತ್ತಿದ್ದು, ಅಧಿಕಾರಿಗಳು ಕೂಡಲೇ ಕಾಮಗಾರಿ ಪೂರ್ಣಗೊಳಿಸಿ, ಆರೋಗ್ಯ ಉಪಕೇಂದ್ರವನ್ನು ಲೋಕಾರ್ಪಣೆ ಮಾಡುವಂತೆ ಗುಡುಗಿದರು.



**ಅಂಗನವಾಡಿ ಕೇಂದ್ರಕ್ಕೆ ಭೇಟಿ :** ಗ್ರಾಮದಲ್ಲಿನ ಅಂಗನವಾಡಿ ಕೇಂದ್ರದ ಹಳೇ ಕಟ್ಟಡಗಳನ್ನು ಪರಿಶೀಲಿಸಿ, ಶಾಸಕರ ನಿಧಿಯಡಿ ಹೊಸ ಅಂಗನವಾಡಿ ಕಟ್ಟಡ ನಿರ್ಮಿಸುವುದಾಗಿ ಭರವಸೆ ನೀಡಿದರು.

ಗ್ರಾಮದಲ್ಲಿ ಚರಂಡಿ ವ್ಯವಸ್ಥೆ ಇಲ್ಲದ ಕಾರಣ ಧಾರಾಕಾರ ಮಳೆ ಸುರಿದರೆ, ಗ್ರಾಮದ ಮನೆಗಳಿಗೆ ನೀರು ನುಗ್ಗಿ ಜನಜೀವನ ಅಸ್ತವ್ಯಸ್ತವಾಗುತ್ತದೆ ಎಂಬ ಗ್ರಾಮಸ್ಥರ ಮಾತನ್ನು ಆಲಿಸಿದ ಶಾಸಕರು, 50 ಲಕ್ಷ ರೂ. ಅನುದಾನ ಬಿಡುಗಡೆ ಮಾಡಿಸಿ, ದೊಡ್ಡ ಚರಂಡಿ ನಿರ್ಮಾಣ ಮಾಡಿಸುವುದಾಗಿ ಭರವಸೆ ನೀಡಿದರು.

ಈ ವೇಳೆ ಗ್ರಾ.ಪಂ. ಅಧ್ಯಕ್ಷ ಹಿಮಾಕ್ಷಿ ರವಿ, ತಾ.ಪಂ. ಮಾಜಿ ಸದಸ್ಯ ಸತೀಶ್ ಪಟೇಲ್, ಬಸವಾಪಟ್ಟಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಜಿ. ನಾಗರಾಜ್, ಗ್ರಾಮದ ಮುಖಂಡ ಶಿವಮೂರ್ತಿ, ನರ್ಸ್ ದ್ರಾಕ್ಷಾಯಣಮ್ಮ, ಶ್ರೀದೇವಿ ಮತ್ತು ಗ್ರಾಮಸ್ಥರು ಇದ್ದರು.

# ಎಸ್ಸೆಸ್-94: ಕಪ್ ಫುಟ್‌ಬಾಲ್ ಪಂದ್ಯ ಉದ್ಘಾಟನೆ




ದಾವಣಗೆರೆ, ಜೂ. 25- ಕ್ರೀಡಾ ಚಟುವಟಿಕೆಗಳು ರಾಜ್ಯಾದ್ಯಂತ ಹೆಚ್ಚು ನಡೆದರೆ ಕ್ರೀಡಾಪಟುಗಳಿಗೆ ತುಂಬಾ ಸಹಕಾರಿಯಾ ಗುತ್ತದೆ ಎಂದು ಕ್ರೀಡಾಪಟುಗಳ ಸಂಘದ ಜಿಲ್ಲಾಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರು ಹೇಳಿದರು.

ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರ ಜನ್ಮ ದಿನದ ಅಂಗವಾಗಿ ನಗರದಲ್ಲಿ ಏರ್ಪಡಿಸಲಾಗಿದ್ದ ಎಸ್ಸೆಸ್ - 94 ಕಪ್ ಫುಟ್ಬಾಲ್ ಪಂದ್ಯಾವಳಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಾಮನೂರು ಶಿವಶಂಕರಪ್ಪ ಅವರು ಇನ್ನು ನೂರು ವರ್ಷಗಳು ಬಾಳಿ, ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುವಂತಾಗಲಿ. ರಾಷ್ಟ್ರ ಮಟ್ಟದ ಪಂದ್ಯಾವಳಿ ಏರ್ಪಡಿಸಲು ಫುಟ್ಬಾಲ್ ಅಸೋಸಿಯೇಷನ್ ಅವರಲ್ಲಿ ಮನವಿ ಮಾಡಿದರು.

17 ವರ್ಷದ ವಿಭಾಗದಲ್ಲಿ ರಾಣೇಬೆನ್ನೂರು ಉನ್ನತಿ ಪಿಯು ಕಾಲೇಜಿನ ನಾಗಶಾಂತಿ ಪ್ರಥಮ ಸ್ಥಾನ, ಬೆಳಗಾವಿ ಪಿಯು ಕಾಲೇಜಿನ ಲಿಂಗರಾಜ ದ್ವಿತೀಯ ಸ್ಥಾನ ಪಡೆದರು.

15 ವರ್ಷದ ಒಳಗಿನ ಬಾಲಕರ ವಿಭಾಗದಲ್ಲಿ ಸೇಂಟ್ ಕ್ಸೇವಿಯರ್ಸ್ ಬೆಳಗಾವಿ ಪ್ರಥಮ ಸ್ಥಾನ, ಡಿ-ಯುನೈಟೆಡ್ ಫುಟ್ಬಾಲ್ ಅಕಾಡೆಮಿ ರಾಣೆಬೆನ್ನೂರು ದ್ವಿತೀಯ ಸ್ಥಾನವನ್ನು ಪಡೆದುಕೊಂಡವು.

15 ವರ್ಷದ ಒಳಗಿನ ಬಾಲಕಿಯರ ವಿಭಾಗದಲ್ಲಿ ಡಿ-ಯುನೈಟೆಡ್ ಫುಟ್ಬಾಲ್ ಅಕಾಡೆಮಿ ರಾಣೆಬೆನ್ನೂರು ಪ್ರಥಮ ಸ್ಥಾನವನ್ನು, ಶಿವಮೊಗ್ಗ ತಂಡ ದ ಆಟಗಾರರು ದ್ವಿತೀಯ ಸ್ಥಾನ ಪಡೆದರು.

ವಿಜೇತರಿಗೆ ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಪ್ರಶಸ್ತಿ ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ಡಿಡಿಎಫ್‌ಎ ಪ್ರಧಾನ ಕಾರ್ಯದರ್ಶಿಅಲ್ಲಾವಲಿ ಮುಜಾಹಿದ್ ಖಾನ್, ಮೊಹಮ್ಮದ್ ರಫೀಕ್, ಚಂದ್ರಶೇಖರ್, ಡೇವಿಡ್, ಪ್ರಸನ್ನ, ಖಲೀ ಖಾಝಿ, ನಾಗೇಶ್, ಪ್ರವೀಣ್, ಕೋಚ್ ಡೊಮಿನಿಕ್ ಮತ್ತಿತರರಿದ್ದರು.

# ಶ್ರೀ ಜಿಹ್ವೇಶ್ವರ ಸ್ವಾಮಿ ದೇವಸ್ಥಾನ ನಿರ್ಮಾಣಕ್ಕೆ ತೀರ್ಮಾನ

ಮೊಳಕಾಲ್ಮೂರು, ಜೂ. 25 - ಇಲ್ಲಿನ ಸ್ವಕುಳಸಾಳಿ ನೇಕಾರ ಸಮುದಾಯದ ನಡೆದ ರಾಜ್ಯ ಮಟ್ಟದ ಸಭೆಯಲ್ಲಿ ಗುರುಪೀಠದ ಆವರಣದಲ್ಲಿ ಸಮಾಜದ ಮೂಲಪುರುಷ ಶ್ರೀ ಜಿಹ್ವೇಶ್ವರ ಸ್ವಾಮಿ ದೇವಸ್ಥಾನ ನಿರ್ಮಿಸಲು ಮುಖಂಡರು ತೀರ್ಮಾನಿಸಿದರು.

ಹರಿದ್ವಾರದಿಂದ ಭಾನುವಾರ ಮಠಕ್ಕೆ ಆಗಮಿಸಿದ್ದ ಕರಣಗಿರಿ ಮಹಾರಾಜ್ ಸ್ವಾಮೀಜಿಯನ್ನು ಸನ್ಮಾನಿಸಿದ ನಂತರ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

ಜಿಹ್ವೇಶ್ವರ ಮಂದಿರ ನಿರ್ಮಾಣಕ್ಕೆ ಈಚೆಗೆ ದಾವಣಗೆರೆಯಲ್ಲಿ ನಡೆದ ಸಮುದಾಯದ ರಾಜ್ಯಮಟ್ಟದ ಸಭೆಯಲ್ಲಿ ನಿರ್ಣಯ ಮಂಡಿಸಲಾಗಿತ್ತು. ಇದಕ್ಕೆ ಬೆಂಗಳೂರಿನ ಆನೇಕಲ್‌ನ ವಾಸ್ತುಶಾಸ್ತ್ರ ಪರಿಣಿತೆ ವಿನುತಾ ರಾಜೇಶ್ ಸವ್ವಾಸೇರೆ ಅವರು ದೇವಸ್ಥಾನ ನಿರ್ಮಾಣಕ್ಕೆ ಸ್ಥಳ ಸೂಚಿಸಿ, ಕೈಗೊಳ್ಳಬೇಕಾದ ಆಚರಣೆಗಳ ಬಗ್ಗೆ ತಿಳಿಸಿದ್ದಾರೆ. ಅನೇಕ ದಾನಿಗಳು ದೇವಸ್ಥಾನ ನಿರ್ಮಾಣಕ್ಕೆ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ ಎಂದು ಸಮುದಾಯದ ರಾಜ್ಯ ಘಟಕದ ಅಧ್ಯಕ್ಷ ಸಿ.ಎನ್. ಭಂಡಾರೆ ಹೇಳಿದರು.

ರಾಜ್ಯ ಘಟಕದ ಉಪಾಧ್ಯಕ್ಷ ಗುರುನಾಥ್ ಪಾಣಿ ಭಾತೆ, ಸ್ಥಳೀಯ ಮುಖಂಡರಾದ ಡಿ.ಎಂ. ಈಶ್ವರಪ್ಪ, ವಾಂಜ್ರೆ ರಮೇಶ್, ಅಶೋಕ್ ಗಾಯಕ್‌ವಾಡ್, ಶ್ರೀಧರ ಸಫಾರೆ, ಪ್ರದೀಪ್ ಕಾಂಬ್ಳೆ, ಗಿರೀಶ್ ಪಾಣಿಭಾತೆ, ಶುಭಾ, ಡಿಶ್ ರಾಜು, ಪ್ರೇಮಾ ಕಾಂಬ್ಳೆ, ಗುರುಮೂರ್ತಿ ಏಕಬೋಟೆ ಉಪಸ್ಥಿತರಿದ್ದರು.



## ಮಳೆಗಾಗಿ ಪ್ರಾರ್ಥಿಸಿ ಕರಿಗಲ್ಲು ಪೂಜೆ



ಮಲೇಬೆನ್ನೂರು, ಜೂ. 25 - ಮಳೆಗಾಗಿ ಪ್ರಾರ್ಥಿಸಿ ಹಾಲಿವಾಣ ಗ್ರಾಮಸ್ಥರು ಮಂಗಳವಾರ ಉರಮುಂದಿನ ಕರಿಗಲ್ಲು ಪೂಜೆ ಮಾಡಿದರು. ಗ್ರಾಮದ ಮಹಿಳೆಯರು ಬೆಳಗಿನ ಜಾವ ಗಂಗೆಯನ್ನು ಪೂಜಿಸಿ ಆ ಗಂಗೆ ಮೂಲಕ ಕರಿಗಲ್ಲಿಗೆ ಅಭಿಷೇಕ ಮಾಡಿದರು.

ಗ್ರಾಮದ ಜಂಗಮ ವಟುಗಳು ಮಂತ್ರೋಪದೇಷವನ್ನು ಪಠಣ ಮಾಡಿ ಕರಿಗಲ್ಲಿಗೆ ದೀಕ್ಷೆ ನೀಡಿದರು. ನಂತರ ಗ್ರಾಮದ ಗಡಿ ಸುತ್ತಲು ಚರಗವನ್ನು ಹಾಕಲಾಯಿತು.

## ನಗರದಲ್ಲಿ ಇಂದು ಮಳೆ ನೀರು ಕೊಯ್ಲು ಸಂವಾದ ಕಾರ್ಯಕ್ರಮ

ಪ್ರೇರಣಾ ಯುವ ಸಂಸ್ಥೆ, ಭಾರತ ವಿಕಾಸ ಪರಿಷದ್, ರೋಟರಿ ಕ್ಲಬ್ ಇವರ ಸಂಯುಕ್ತಾಶ್ರಯದಲ್ಲಿ ಮಳೆ ನೀರು ಕೊಯ್ಲು ಸಂವಾದ ಕಾರ್ಯಕ್ರಮವು ಇಂದು ಬೆಳಿಗ್ಗೆ 10.45ಕ್ಕೆ ಹೈಸ್ಕೂಲ್ ಮೈದಾನದ ಬಳಿ ಇರುವ ಜಿಲ್ಲಾ ಸ್ಕೌಟ್ಸ್ ಭವನದಲ್ಲಿ ನಡೆಯಲಿದೆ.

ಹೆಸರಾಂತ ಮಳೆ ನೀರು ಕೊಯ್ಲು ಸಲಹೆಗಾರ ವಿಜಯರಾಜ್ ಸಿಸೋದ್ಯಾ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಲಿದ್ದಾರೆ.

ಪರಿವರ್ಧನಾ ವೇದಿಕೆಯ ಅಧ್ಯಕ್ಷರಾದ ಹಿರಿಯ ವೈದ್ಯರಾದ ಡಾ. ಶಾಂತಾ ಭಟ್ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮಾಜಿ ಮಹಾಪೌರ ಎಸ್.ಟಿ. ವೀರೇಶ್, ಪಾಲಿಕೆ ವಿರೋಧ ಪಕ್ಷದ ನಾಯಕ ಪ್ರಸನ್ನ ಕುಮಾರ್, ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ, ಭಾರತ ವಿಕಾಸ ಪರಿಷದ್ ಅಧ್ಯಕ್ಷ ಎ.ಎಸ್. ವಿಜಯಕುಮಾರ್, ಕಾರ್ಯದರ್ಶಿ ಎಂ.ಆರ್. ಮಧುಕರ್, ರೋಟರಿ ಕ್ಲಬ್ ಅಧ್ಯಕ್ಷರಾದ ಕುಸುಮಾ ವಿಜಯಾನಂದ್, ಕಾರ್ಯದರ್ಶಿ ಸುನೀತಾ ಮೃತ್ಯುಂಜಯ ಉಪಸ್ಥಿತರಿರುವರು.

## ನಗರದಲ್ಲಿ ನಾಳೆ 'ದರ್ಪಣ' ಕವನ ಸಂಕಲನ ಬಿಡುಗಡೆ

ದಾವಣಗೆರೆ, ಜೂ. 25 - ಮೈಸೂರಿನ ಸಂಸ್ಕೃತಿ ಪ್ರಕಾಶನ ಹಾಗೂ ದಾವಣಗೆರೆ ಕನ್ನಡ ಸಾಹಿತ್ಯ ಪರಿಷತ್ತು ಸಹಯೋಗದಲ್ಲಿ ಶ್ರೀಮತಿ ಛಾಯಾ ಶ್ರೀಧರ್ ಅವರ 'ದರ್ಪಣ' (ಪ್ರಕಾಶಕರು : ಶ್ರೀ ಸಂಸ್ಕೃತಿ ಸುಬ್ರಹ್ಮಣ್ಯ) ಕವನ ಸಂಕಲನ ಬಿಡುಗಡೆ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ ದಿನಾಂಕ 27ರ ಗುರುವಾರ ಸಂಜೆ 5.30ಕ್ಕೆ ಇಲ್ಲಿನ ಕುವೆಂಪು ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಹಿರಿಯ ಕವಯತ್ರಿ ಹಾಗೂ ವೈಚಾರಿಕ ಬರಹಗಾರರಾದ ಶ್ರೀಮತಿ ಶಶಿಕಲಾ ವಸ್ತ್ರದ ಕೃತಿ ಲೋಕಾರ್ಪಣೆ ಮಾಡುವರು. ಹಿರಿಯ ಸಾಹಿತಿ ಬಿ.ಟಿ. ಜಾಹ್ನವಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಕಸಾಪ ಅಧ್ಯಕ್ಷ ವಾಮದೇವಪ್ಪ ಉಪಸ್ಥಿತರಿರುವರು.

## ಹಿರಿಯರ ಸೌಲಭ್ಯಗಳ ಅರಿವು

ದಾವಣಗೆರೆ, ಜೂ.25- ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಇಲಾಖೆಯ ವತಿಯಿಂದ ಹಾಗೂ ಇತರೆ ಇಲಾಖೆಗಳಿಂದ ಹಿರಿಯ ನಾಗರಿಕರಿಗೆ ದೊರೆಯುತ್ತಿರುವ ಸೌಲಭ್ಯಗಳ ಅರಿವು ಮೂಡಿಸುವ ಮತ್ತು ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡುವ ಉದ್ದೇಶದಿಂದ ತಾಲ್ಲೂಕು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರಿಂದ ಹಿರಿಯ ನಾಗರಿಕ ರಿಗೆ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆಯಬಹುದು.

**ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರ ವಿವರ :** ಹೊನ್ನಾಳಿ ತಾ.ಪಂ.ಕಾರ್ಯಾ ಲಯ ಶೈಲಜಾ ಕೆ.ಎಂ. (9482158005), ಚನ್ನಗಿರಿ ತಾ.ಪಂ.ಕಾರ್ಯಾ ಲಯ ಕೆ. ಸುಬ್ರಮಣ್ಯಂ (9945738141), ಜಗಳೂರು ತಾ.ಪಂ. ಕಾರ್ಯಾಲಯ, ಎಂ.ಕೆ. ಶಿವನಗೌಡ (9902105734), ಹರಿಹರ ತಾ.ಪಂ. ಕಾರ್ಯಾಲಯ, ಶಶಿಕಲಾ ಟಿ. (9945458058), ದಾವಣಗೆರೆ ತಾ.ಪಂ.ಕಾರ್ಯಾಲಯ, ಚನ್ನಪ್ಪ ಬಿ. (9590829024) ಅವರನ್ನು ಸಂಪರ್ಕಿಸುವಂತೆ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ಡಾ.ಕೆ.ಕೆ. ಪ್ರಕಾಶ್ ಕೋರಿದ್ದಾರೆ.

## ಜು.21ಕ್ಕೆ ವೀರಶೈವ ಮಹಾಸಭಾದ ಚುನಾವಣೆ

ದಾವಣಗೆರೆ, ಜೂ.25- ಅಖಿಲ ಭಾರತ ವೀರಶೈವ ಮಹಾಸಭಾದ ದಾವಣಗೆರೆ ಜಿಲ್ಲಾ ಘಟಕಕ್ಕೆ ಜುಲೈ 21ರಂದು ಚುನಾವಣೆ ನಡೆಯಲಿದೆ ಎಂದು ಉಪಚುನಾವಣಾಧಿಕಾರಿ ಪ್ರೊ.ವೈ. ವೃಷಭೇಂದ್ರಪ್ಪ ತಿಳಿಸಿದ್ದಾರೆ.

ತಾಲ್ಲೂಕು, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಘಟಕದ ಅಧ್ಯಕ್ಷ ಹಾಗೂ ಕಾರ್ಯನಿರ್ವಾಹಕ ಸಮಿತಿ ರಚಿಸಲು ಈ ಚುನಾವಣೆ ನಡೆಯಲಿದ್ದು, ಅಂದು ನಗರದ ಎಂಬಿಎ ಕಾಲೇಜು ಆವರಣದಲ್ಲಿನ ವೀರಶೈವ ಮಹಾಸಭಾದ ಕಚೇರಿಯಲ್ಲಿ ಮತದಾನ ನಡೆಯಲಿದೆ.

ನಾಡಿದ್ದು ದಿನಾಂಕ 27ರ ಗುರುವಾರದಿಂದ ನಾಮಪತ್ರ ಸ್ವೀಕರಿ ಸುವ ಪ್ರಕ್ರಿಯೆ ಪ್ರಾರಂಭವಾಗಿ, ಜುಲೈ 4ರಂದು ನಾಮ ಪತ್ರ ಸಲ್ಲಿಕೆಗೆ ಕೊನೆ ದಿನವಾಗಲಿದೆ. ಜುಲೈ 5ರಂದು ನಾಮಪತ್ರ ಪರಿಶೀಲನೆ ಆಗಲಿದ್ದು, ಜು.8ರಂದು ನಾಮಪತ್ರ ಹಿಂಪಡೆಯಬಹುದು. ಚುನಾವಣೆಯ ನಂತರ ಫಲಿತಾಂಶ ಪ್ರಕಟವಾಗಲಿದೆ.

## ದೇವಾಂಗ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ದಾವಣಗೆರೆ, ಜೂ. 25- ದಾವಣಗೆರೆ ನಗರ ದೇವಾಂಗ ಸಂಘದ ವತಿಯಿಂದ 7ನೇ ವರ್ಷದ ದೇವಾಂಗ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಬಿ.ಎನ್. ಬಾಬು, ಕಾರ್ಯದರ್ಶಿ ಕೆ. ವೆಂಕಟೇಶ್ ತಿಳಿಸಿದ್ದಾರೆ. ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ (ಸ್ಟೇಟ್ ಸಿಲಬಸ್) ಶೇ. 85., ಎಸ್ಸೆಸ್ಸೆಲ್ಸಿ (ಸಿಬಿಎಸ್‌ಇ) 75, ಹಾಗೂ ಪಿಯುಸಿಯಲ್ಲಿ ಶೇ.85ರಷ್ಟು ಅಂಕ ಪಡೆದಿರುವ ನಗರದಲ್ಲಿ ವ್ಯಾಸಂಗ ಮಾಡಿದ ದೇವಾಂಗ ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಇದೇ ದಿನಾಂಕ 30 ಕೊನೆ ದಿನ.

## ನಗರದಲ್ಲಿ ಪಿಜಿ ಸಿಇಟಿ ಕೋಚಿಂಗ್

ದಾವಣಗೆರೆ,ಜೂ.25- ನಗರದ ಬಾಪೂಜಿ ಎಂಬಿಎ ಕಾಲೇಜ್ ಲೇಕ್ ವ್ಯೂ ಕ್ಯಾಂಪಸ್‌ನಲ್ಲಿ ಪಿಜಿ ಸಿಇಟಿ 2024-25 ಸಾಲಿನ ಎಂಬಿಎ ಕೋರ್ಸ್ ಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ 5 ದಿನದ ತರಬೇತಿಯನ್ನು ಬರುವ ಜುಲೈ 1 ರಿಂದ ಜುಲೈ 5 ರವರೆಗೆ ಹಮ್ಮಿಕೊಳ್ಳಲಾಗಿದೆ.

ಆಸಕ್ತ ವಿದ್ಯಾರ್ಥಿಗಳು ಹೆಸರು ನೋಂದಾಯಿಸಲು ಜೂನ್ 29 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 7975568353.

### ಭದ್ರಾ ಜಲಾಶಯ




ನೀರಿನ ಮಟ್ಟ : 119 ಅಡಿ 7 ಇಂಚು
ಒಳ ಹರಿವು : 1419 ಕ್ಯೂಸೆಕ್ಸ್
ಹೊರ ಹರಿವು : 343 ಕ್ಯೂಸೆಕ್ಸ್
ಕಳೆದ ವರ್ಷ : 137 ಅಡಿ 3/4 ಇಂಚು

ಮೂರನೇ ವರ್ಷದ ಚಿರಸ್ಮರಣೆ



ದಿ|| ಕಣ್ಣಾಳ್ ಅವಿನಾಶ್ ಪಿ.
ಅಗಲಿದ ಗೆಳೆಯನ ಸದಾ ನೆನಪಿನಲ್ಲಿರುವ...
ನವೀನ್ ತಾಳಿಕಟ್ಟೆ ಮತ್ತು ಪ್ರವೀಣ್ ಸಿ. ಶಾಮನೂರು
ಹಾಗೂ ನಿನ್ನ ಪ್ರೀತಿಯ ಕಣ್ಣಾಳ್ ವಂಶಸ್ಥರು ಮತ್ತು ಸ್ನೇಹ ಬಳಗ

ಸವಿನೆನಪು





ಲಿಂ|| ಮಾಗಾನಹಳ್ಳಿ ಮಹಾದೇವಪ್ಪ
25ನೇ ಪುಣ್ಯಸ್ಮರಣೆ


ಲಿಂ|| ಶ್ರೀಮತಿ ಪುಟ್ಟಮ್ಮ
18ನೇ ಪುಣ್ಯಸ್ಮರಣೆ

ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ



ಲಿಂ|| ಎಂ. ಹಾಲಪ್ಪ ಮತ್ತು ಲಿಂ|| ಶ್ರೀಮತಿ ಸುನಂದಮ್ಮ ಇವರ ಮಗನಾದ
ಚಿ|| ಶಶಿಧರ ಎಂ.ಹೆಚ್. ಮತ್ತು
ಮಾಗಾನಹಳ್ಳಿ, ಮುಂಡಾಸ ವಂಶಸ್ಥರು
ಹಾಗೂ ಬಂಧು-ಮಿತ್ರರು, ದಾವಣಗೆರೆ.
ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಪುಣ್ಯಸ್ಮರಣೆ ಪ್ರಯುಕ್ತ ಅನ್ನ ಸಂತರ್ಪಣೆ

ಅಮೃತ ಪುರುಷ ಸಿ.ಆರ್.ವಿ. @98
ಜನ್ಮದಿನದ ಹಾರ್ದಿಕ ಶುಭಾಶಯಗಳು



ತಮ್ಮ ಬದುಕಿನ ಸಾರ್ಥಕ 98ನೇ
ಜನ್ಮದಿನವನ್ನು ಆಚರಿಸಿಕೊಳ್ಳುತ್ತಿರುವ
ನಮ್ಮ ಟ್ರಸ್ಟ್‌ನ ಅಧ್ಯಕ್ಷರು,
ಚನ್ನಗಿರಿ ಮನೆತನದ ಹಿರಿಯರು, ಅಜಾತ ಶತ್ರು,
ಶ್ರೀ ಚನ್ನಗಿರಿ ವಿರೂಪಾಕ್ಷಪ್ಪ
ಇವರಿಗೆ ಜನ್ಮದಿನದ ಶುಭಾಶಯಗಳು.
ಶ್ರೀಯುತರು ನೂರು ವಸಂತಗಳನ್ನು ಕಾಣಲಿ, ಇವರಿಂದ ಸಮಾಜಕ್ಕೆ ಇನ್ನೂ ಹೆಚ್ಚಿನ ಸೇವೆ, ಮಾರ್ಗದರ್ಶನ ದೊರೆಯಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
ಶುಭ ಕೋರುವವರು
ಪ್ರಧಾನ ಕಾರ್ಯದರ್ಶಿ ಶ್ರೀ ಭರತ್ ಎಸ್. ಚನ್ನಗಿರಿ
ಟ್ರಸ್ಟಿಗಳು: ಶ್ರೀ ಸಿ.ಆರ್. ಸತ್ಯನಾರಾಯಣ
ಶ್ರೀ ಸಿ.ಆರ್. ಕೃಷ್ಣಮೂರ್ತಿ, ಶ್ರೀ ಜೆ.ಎನ್. ವಸಂತಕುಮಾರ್,
ಶ್ರೀ ಆರ್.ಆರ್. ರಮೇಶ್‌ಬಾಬು, ಶ್ರೀ ಬಿ.ವಿ. ಗಂಗಪ್ಪ ಶ್ರೇಷ್ಠಿ,
ಶ್ರೀ ಸಿ.ಕೆ. ಪ್ರಶಾಂತ್, ಶ್ರೀ ಸಿ.ಸಿ. ಬದರಿನಾಥ್

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas